ಯಕ್ಷಗಾನ ಪ್ರಸಂಗ

ಏಕಲವ್ಯ

(ಅರ್ಥಸಹಿತ)

ಪ್ರಸಂಗ ಕರ್ತ

ಡಾ. ಚಂದ್ರಶೇಖರ ದಾಮ್ಲೆ

ಪ್ರಕಾಶಕರು

ಸ್ನೇಹ ಶಿಕ್ಷಣ ಸಂಸ್ಥೆ (ರಿ.) ಸುಳ್ಯ

2005

ಯಕ್ಷಗಾನ ಪ್ರಸಂಗ

ಏಕಲವ್ಯ

(ಅರ್ಥಸಹಿತ)

ಪ್ರಸಂಗ ಕರ್ತ

ಡಾ. ಚಂದ್ರಶೇಖರ ದಾಮ್ಲೆ

ಪ್ರಕಾಶಕರು

ಸ್ನೇಹ ಶಿಕ್ಷಣ ಸಂಸ್ಥೆ (ರಿ.) ಸುಳ್ಯ

2005

EKALAVYA (Yakshagana Prasanga) Written by Dr. Chandrashekhara Damle, Professor of Sociology, Nehru Memorial College SULLIA - 574 327, D. K. District, Karnataka

Copy Right	:	The Author
Published by	:	Sneha Shikshana Samsthe (R.) P. O. SULLIA - 574 239 D. K. District, Karnataka
Pages	:	VI + 32
First Impression	:	2005
Copies Printed	:	400
Price	:	20/- (Rupees Twenty only)
Printed at	:	Sarvodaya Printers Carstreet Sullia D.K. - 574 239 Ph : 08257 - 230291

ಪ್ರಸಂಗಕ್ಕೆ ಮುನ್ನ.....

ಈ ವರ್ಷವನ್ನು (2004) ರಾಷ್ಟ್ರಕವಿ ಕುವೆಂಪು ಜನ್ಮಶತಾಬ್ದಿಯ ಹಬ್ಬವನ್ನಾಗಿ ಆಚರಿಸಲಾಗುವುದೆಂಬ ಕರ್ನಾಟಕ ಸರಕಾರದ ಘೋಷಣೆಗೆ ಸ್ಪಂದಿಸಿದವರೆಷ್ಟೆಂಬುದನ್ನು ನಾನರಿಯೆ. ಆದರೆ ನನ್ನೊಳಗೆ ಏನೋ ಸ್ಫುರಣೆಯುಂಟಾಗಿ ಈ ಆಚರಣೆಯು ಒಂದು ಸಂಸ್ಮರಣ ರೂಪದಲ್ಲಿ ಉಳಿದು ಬರಬೇಕೆಂಬ ಪ್ರೇರಣೆಯುಂಟಾಯಿತು. ಹಾಗಾಗಿ ಸುಳ್ಯದ ನಮ್ಮ ಸ್ನೇಹ ಶಿಕ್ಷಣ ಸಂಸ್ಥೆಯಲ್ಲಿ ಈ ಭಾಗದ ಒಬ್ಬ ಖ್ಯಾತ ಚಿಂತಕ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರಿಂದ ಐದು ದಿನಗಳಲ್ಲಿ (೨೦೦೪ ಮಾರ್ಚ್ ೨೫ ರಿಂದ ೨೯ರ ತನಕ) ಸಂಧ್ಯಾಕಾಲದಲ್ಲಿ ಕುವೆಂಪು ರಚಿತ ಶ್ರೀ ರಾಮಾಯಣ ದರ್ಶನಂ ಕೃತಿಯ ಬಗ್ಗೆ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿದೆವು. ಇದೇ ಸಂದರ್ಭದಲ್ಲಿ ನನಗೆ ಹೊಳೆದ ಇನ್ನೊಂದು ವಿಚಾರವೆಂದರೆ ಕುವೆಂಪು ರಚಿತವಾದ ಸಾಹಿತ್ಯ ಕೃತಿಯೊಂದನ್ನು ಅವರ ಆಶಯಕ್ಕೆ ಭಂಗಬಾರದಂತೆ ಯಕ್ಷಗಾನಕ್ಕೆ ರೂಪಾಂತರಿಸಿ ಜನರಿಗೆ ತಲುಪಿಸುವ ಪ್ರಯೋಗ ಮಾಡಬಹುದಲ್ಲವೇ? ಈ ಪ್ರಯತ್ನಕ್ಕೆ ನಾನು ಆಯ್ದುಕೊಂಡದ್ದು ಕುವೆಂಪುರವರ 'ಬೆರಳ್‌ಗೆ ಕೊರಳ್' ಎಂಬ ಪ್ರಖ್ಯಾತ ನಾಟಕವನ್ನು. ಏಕೆಂದರೆ ಇದು ಪೌರಾಣಿಕ ಕತೆಯಾಗಿದ್ದೂ ಪ್ರಸ್ತುತ ಸಮಾಜದಲ್ಲಿ ಬೇರೂರಿರುವ ಕ್ರೌರ್ಯದ ವಿರುದ್ಧವಾದ ಚಿಂತನೆಯ ಒಂದು ಎಳೆಯನ್ನು ಓದುಗರ /ಪ್ರೇಕ್ಷಕರ ಮನದಲ್ಲಿ ನೇಯ್ದುಬಿಡುತ್ತದೆ. ನಾನು ಮೊದಲಿನಿಂದಲೂ ಶಿಕ್ಷಣದ ಸಾರ್ವತ್ರಿಕತೆಯ ಒಲವುಳ್ಳವನಾಗಿರುವ ಕಾರಣ ಏಕಲವ್ಯನಿಗೆ ಆದ ವಂಚನೆಯ ಕತೆಯು ನನ್ನ ಮನಸ್ಸನ್ನು ತೀವ್ರವಾಗಿ ಕಲಕಿತ್ತು. ಆದರೆ ನನ್ನನ್ನು ಕಾಡುತ್ತಿದ್ದ ಪ್ರಶ್ನೆಯೆಂದರೆ ಹೀನ ಜಾತಿಯನ್ನು ನೆಪವಾಗಿಟ್ಟು ಗುರುಕುಲಕ್ಕೆ ಪ್ರವೇಶವನ್ನೇ ನಿರಾಕರಿಸಿದ ದ್ರೋಣರ ಮೂರ್ತಿಯನ್ನು ಮಾಡಿ ಕಲಿಯುವ ಶ್ರದ್ಧೆ ಏಕಲವ್ಯನಲ್ಲಿ ಮೂಡಿರಬಹುದೆ ? ಈ ಸಂಶಯಕ್ಕೆ ನನಗೆ ಉತ್ತರ ದೊರಕಿದ್ದು ಕುವೆಂಪುರವರ ಬೆರಳ್‌ಗೆ ಕೊರಳ್ ನಾಟಕದಲ್ಲಿ. ಪ್ರಭುವರ್ಗ ನಿರಾಕರಿಸಿದರೂ ಹೀನ ಜಾತಿಯೆಂದು ತಿರಸ್ಕೃತನಾದ ಒಬ್ಬ ಬಾಲಕನಿಗೆ ತನ್ನ ಮನೆಯಲ್ಲೇ, ಅದೂ ತನ್ನ ಮಗನ ಜೊತೆಯಲ್ಲೇ, ಶಿಕ್ಷಣ ನೀಡಲು ಒಪ್ಪುವ ದ್ರೋಣರ ವಿಶಿಷ್ಟ ಚಿತ್ರಣ ಕುವೆಂಪುರವರದು. ಇಂತಹ ಉದಾರ ಚಿಂತನೆಯುಳ್ಳ ದ್ರೋಣರ ಪ್ರತಿಮೆಯನ್ನು ಮಾಡಿ ಕಲಿಯುವ ಆಸೆ ಏಕಲವ್ಯನಲ್ಲಿ ಮೂಡಿದ್ದರಲ್ಲಿ ಅರ್ಥವಿದೆ.

ಆದರೆ ನಿಷ್ಕಳಂಕ ಗುರುಭಕ್ತಿಯ ಏಕಲವ್ಯನನ್ನು ಕೊನೆಗೂ ಪ್ರಭುಚಿತ್ತದ ಪ್ರತಿನಿಧಿಯಾಗಿ ದ್ರೋಣರು ಬಲಿಪಶುವಾಗಿಸುತ್ತಾರೆ. ಆಗ ಏಕಲವ್ಯನ ತಾಯಿಯ ಬಾಯಿಂದ ಬರುವ "ಬೆರಳ್‌ಗೆ ಕೊರಳ್ ಬಲಿಯಾಗಲಿ" ಎಂಬ ಉದ್ಗಾರವು ಉನ್ನತ ವರ್ಗದ ಕ್ರೌರ್ಯದ ವಿರುದ್ಧದ ಪ್ರತಿಭಟನೆಯ ಧ್ವನಿಯಾಗಿ ಕೇಳಿಬರುತ್ತದೆ. ನಾಟಕವು ನೀಡುವ ಈ ಸಂವೇದನೆಯನ್ನು ಸಾಹಿತ್ಯ ಓದದ ಸಾವಿರಾರು ಮಂದಿಗೆ ಯಕ್ಷಗಾನದ ರಂಗಸ್ಥಳದಿಂದ ತಲುಪಿಸಬಹುದಾಗಿದೆ. ಹಾಗಾಗಿ ನಾನು ಈ ಕೃತಿಯ ವಸ್ತುವನ್ನು ಯಕ್ಷಗಾನೀಯ ಪ್ರಸಂಗವಾಗಿ ಬರೆದೆ. ಆದರೆ ಕುವೆಂಪುರವರು ಈ ನಾಟಕದಲ್ಲಿ ಹೇಳಿದ್ದ ಕೆಲವೊಂದು ಸೂಕ್ಷ್ಮ ಸಂಗತಿಗಳನ್ನು ಪದ್ಯಗಳ ರೂಪದಲ್ಲೇ ಹೇಳಲು ಹೋದರೆ ಅದನ್ನು ಗ್ರಹಿಸಿಕೊಂಡು ಅರ್ಥ ಹೇಳುವುದು ಕಲಾವಿದರ ಮುಂದೆ ಒಂದು ಸವಾಲಾಗಿ ಬಿಡುತ್ತದೆ. ಅಲ್ಲದೆ ಪ್ರಸಂಗದ ಭಾರವೂ ಹೆಚ್ಚಾಗಿ ಕಲಾವಿದರು ಪದ್ಯಗಳನ್ನು ಬಿಟ್ಟು ಕತೆಯನ್ನು ಮುಂದುವರಿಸುವ ಸಂದರ್ಭದಲ್ಲಿ ಕುವೆಂಪುರವರ ಸೂಕ್ಷ್ಮ ಚಿಂತನೆಗಳು ಮರೆಯಾಗಬಹುದು. ಹಾಗಾಗಿ ಈ ಪ್ರಸಂಗವನ್ನು ಅರ್ಥಸಹಿತವಾಗಿ ಪ್ರಕಟಿಸಿದ್ದೇನೆ.

ಕುವೆಂಪುರವರು ಒಟ್ಟು ನಾಟಕವನ್ನು ಮೂರು ದೃಶ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರು ಏಕಲವ್ಯನ ಮೂಲ ಹೆಸರನ್ನು ಬಚ್ಚ ಎಂಬುದಾಗಿ ಹೇಳುತ್ತಾರೆ. ಆತನ ತಾಯಿಯ ಪಾತ್ರವೇ ಈ ನಾಟಕದಲ್ಲಿ ಪ್ರಧಾನ. ಬಚ್ಚ ಮತ್ತು ಆತನ ತಾಯಿಯ ನಡುವಿನ ಸಂಭಾಷಣೆಯಲ್ಲಿ ಆತನ ಬದುಕಿನ ಅನೇಕ ಘಟನಾವಳಿಗಳು ಬಿಚ್ಚಿಕೊಳ್ಳುತ್ತವೆ. ಒಂದು ರೀತಿಯಲ್ಲಿ Flash back ತಂತ್ರದ ಮೂಲಕ ಕುವೆಂಪುರವರು ಒಟ್ಟು ಕತೆಯ ವಿವರಗಳನ್ನು ತೆರೆದಿಡುತ್ತಾರೆ. ಆದರೆ ಯಕ್ಷಗಾನಕ್ಕೆ ಈ ತಂತ್ರ ಹೊಂದುವುದಿಲ್ಲ. ಆದ್ದರಿಂದ ನಾನು ಮೂಲನಾಟಕದಲ್ಲಿ ಹೇಳಲಾದ ಘಟನಾವಳಿಗಳನ್ನು ಪ್ರತ್ಯೇಕಿಸಿ ತೆಗೆದು ನಂತರ ಒಂದು ಸರಣಿಯ ರೂಪದಲ್ಲಿ ಪೋಣಿಸಿಕೊಂಡು ಈ ಪ್ರಸಂಗವನ್ನು ರಚಿಸಿದ್ದೇನೆ. ಹಾಗಾಗಿ ಯಕ್ಷಗಾನಕ್ಕಾಗುವಾಗ ಏಕಲವ್ಯನ ತಾಯಿಯ ಪಾತ್ರವು ಪ್ರಸಂಗದ ಕೊನೆಯಲ್ಲಿ ಮಾತ್ರ ಪ್ರಾಧಾನ್ಯತೆ ಪಡೆಯುತ್ತದೆ. ಇನ್ನು ಏಕಲವ್ಯನ ತಂದೆಯ ಮರಣದ ವಿಚಾರವನ್ನು ತಿಳಿಸುವ ಆತನ ಚಿಕ್ಕಪ್ಪನ ಪಾತ್ರವನ್ನು ನಾನೇ ಸೃಜಿಸಿದ್ದೇನೆ. ಇದು ರಂಗಸ್ಥಳದಲ್ಲಿ ಕತೆಯ ಓಟಕ್ಕೆ ಅನಿವಾರ್ಯ. ಅಂತೆಯೇ ದ್ರುಪದನ ಒಡ್ಡೋಲಗ

ಹಾಗೂ ಆತನೊಂದಿಗಿನ ಅರ್ಜುನನ ಯುದ್ಧದ ವಿವರಣೆಯು ಕೂಡಾ ಮೂಲನಾಟಕದ್ದಲ್ಲ. ಅದನ್ನು ಯಕ್ಷಗಾನ ರಂಗಕ್ಕಾಗುವಾಗ ಒಂದು ಅಗತ್ಯದ ಸನ್ನಿವೇಶವನ್ನಾಗಿ ನಾನೇ ರೂಪಿಸಿದ್ದೇನೆ. ಗಂಡುಕಲೆಯೆನ್ನಿಸಿದ ಯಕ್ಷಗಾನದಲ್ಲಿ ಯುದ್ಧದ ಸನ್ನಿವೇಶವೇ ಒಂದು ಜೀವಾಳ. ಕತೆಯ ವೇಗವನ್ನು ಗಮನದಲ್ಲಿಟ್ಟುಕೊಂಡು ಈ ಪ್ರಕರಣವನ್ನು ದ್ರುಪದ ಮತ್ತು ಅರ್ಜುನನ ಯುದ್ಧಕ್ಕಷ್ಟೇ ಸೀಮಿತಗೊಳಿಸಿದ್ದೇನೆ. ಏಕೆಂದರೆ ಒಟ್ಟು ಕತೆಯ ಆಶಯವು ಏಕಲವ್ಯನ ಸ್ವಯಂ ಸಾಧನೆ ಮತ್ತು ದ್ರೋಣನ ಸಂಘರ್ಷಗಳ ಮೂಲಕ ವ್ಯಕ್ತವಾಗಬೇಕಾದ ಪ್ರಸಂಗ ಇದು. ಆದರೂ ಅವಶ್ಯವಿದ್ದಲ್ಲಿ ಈ ಪ್ರಸಂಗವನ್ನಾಡುವವರು ದ್ರುಪದ ಮತ್ತು ಕೌರವರೊಂದಿಗೆ ಯುದ್ಧವನ್ನು ಸೇರಿಸಬಹುದು. ಆದರೆ ಅದೇ ಪ್ರಮುಖವಾಗಿ ಕತೆಯ ಆಶಯವನ್ನು ನುಂಗಿಬಿಡಬಾರದೆಂಬ ಎಚ್ಚರವನ್ನಿಟ್ಟುಕೊಳ್ಳಬೇಕಾದುದು ಅಗತ್ಯ.

ಈಗಾಗಲೇ ಈ ಪ್ರಸಂಗವು ನನ್ನ ನಿರ್ದೇಶನದಲ್ಲಿ ಸುಳ್ಯದ ಸ್ನೇಹ ಶಾಲೆಯ ಮಕ್ಕಳ ತಂಡದ ಮೂಲಕ ಪ್ರದರ್ಶನ ಕಂಡಿದೆ. ಹೊಸ ದೃಷ್ಟಿಕೋನದ ವಸ್ತುವುಳ್ಳ ಈ ಪ್ರದರ್ಶನಗಳು ವಿದ್ವಾಂಸರ ವಲಯದಿಂದಲೂ ಯಕ್ಷಗಾನ ಕಲಾವಿದರ ವಲಯದಿಂದಲೂ ಮೆಚ್ಚುಗೆ ಗಳಿಸಿವೆ. ಮೈಸೂರಿನಲ್ಲಿ ಎಸ್. ಡಿ. ಯಂ. ಕಾಲೇಜ್‌ನಲ್ಲಿ ಪ್ರದರ್ಶನ ನಡೆದಾಗ ಪ್ರೇಕ್ಷಕರಾಗಿದ್ದ ಸಾಹಿತಿಗಳು, ಪ್ರೊ. ದೇ. ಜವರೇ ಗೌಡ ಹಾಗೂ ಮೈಸೂರು ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಕುಲಪತಿಗಳಾದ ಪ್ರೊ. ಶಶಿಧರ ಪ್ರಸಾದ್ ಮತ್ತು ಪ್ರೊ. ಚಿದಾನಂದ ಕೊಳಂಬೆಯವರು, ವಿದ್ವಾಂಸರಾದ ಪ್ರೊ. ಜಿ. ಟಿ. ನಾರಾಯಣ ರಾವ್ ಮುಂತಾದವರು ಬೆರಳ್‌ಗೆ ಕೊರಳ್ ನಾಟಕದ ಯಕ್ಷಗಾನೀಯ ರೂಪಾಂತರವು ಯಶಸ್ವಿಯಾಗಿದೆಯೆಂದು ಕೊಂಡಾಡಿದ್ದಾರೆ. ಕಾಲಮಿತಿಯ ಪ್ರಯೋಗಕ್ಕೆ ಹಿರಿಯ ಕಲಾವಿದರಿಗೂ ಸಾಕಷ್ಟು ದ್ರವ್ಯವನ್ನು ನೀಡುವ ಒಂದು ಪ್ರಸಂಗವಾಗಿ ಇದು ಬಳಕೆಗೆ ಬಂದರೆ ಕುವೆಂಪು ಜನ್ಮ ಶತಮಾನೋತ್ಸವದ ಸಂಸ್ಮರಣೆಯು ಅರ್ಥಪೂರ್ಣವಾಗಿ ಆಗುವುದೆಂಬ ವಿಶ್ವಾಸ ನನ್ನದು.

29-12-2004 ಡಾ। ಚಂದ್ರಶೇಖರ ದಾಮ್ಲೆ, ಸುಳ್ಯ

ಪ್ರಕಾಶಕರ ಅರಿಕೆ

ಸುಳ್ಯದ ಸ್ನೇಹ ಶಿಕ್ಷಣ ಸಂಸ್ಥೆಯು ತಾನು ನಡೆಸುತ್ತಿರುವ ಶಾಲೆಗಳಲ್ಲಿ ಔಪಚಾರಿಕ ಪಠ್ಯದೊಂದಿಗೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಅರಳಿಸುವ ಅನೇಕ ಪಠ್ಯೇತರ ಚಟುವಟಿಕೆಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಯಕ್ಷಗಾನದ ಶಿಕ್ಷಣವೂ ಪ್ರಧಾನವಾದುದು. ಮಕ್ಕಳಲ್ಲಿ ಯಕ್ಷಗಾನದ ಆಸಕ್ತಿಯನ್ನು ಬೆಳೆಸುವುದರ ಮೂಲಕ ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸುವ ಪ್ರಯತ್ನ ಇದಾಗಿದೆ. ಈಗಾಗಲೇ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳ ತಂಡವು ಕೃಷ್ಣಲೀಲೆ ಕಂಸ ವಧೆ ಪ್ರಸಂಗವನ್ನು ಯಶಸ್ವಿಯಾಗಿ ಪ್ರದರ್ಶಿಸಿದೆ. ಇದೀಗ ಡಾ. ಚಂದ್ರಶೇಖರ ದಾಮ್ಲೆಯವರು ರಚಿಸಿ ನಿರ್ದೇಶಿಸಿದ 'ಏಕಲವ್ಯ' ಪ್ರಸಂಗವನ್ನು ನಮ್ಮ ಮಕ್ಕಳ ತಂಡವು ಈಗಾಗಲೇ ವಿವಿಧೆಡೆಗಳಲ್ಲಿ ಪ್ರದರ್ಶಿಸಿ ವಿಮರ್ಶಕರ ಮೆಚ್ಚುಗೆ ಗಳಿಸಿದೆ. ಹೊಸ ದೃಷ್ಟಿಕೋನದ ವಿಭಿನ್ನ ವಸ್ತುವನ್ನು ಹೊಂದಿದ ಈ ಪ್ರಸಂಗದ ಪ್ರಕಟಣೆಯು ಯಕ್ಷಗಾನ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ಉಪಯುಕ್ತ ಸೇರ್ಪಡೆಯಾಗಬಹುದೆಂಬ ದೃಷ್ಟಿಯಿಂದ ಇದನ್ನು ಪ್ರಕಾಶಕ್ಕೆ ತರುವ ಸಾಹಸಕ್ಕೆ ಕೈ ಹಾಕಿದ್ದೇವೆ.

ಡಾ. ಚಂದ್ರಶೇಖರ ದಾಮ್ಲೆಯವರು ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದು ಯಕ್ಷಗಾನದ ಹವ್ಯಾಸವನ್ನು ಬೆಳೆಸಿಕೊಂಡವರು. ಸುಳ್ಯದಲ್ಲಿ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯನ್ನು ಸಮಾನಾಸಕ್ತರೊಂದಿಗೆ ಸ್ಥಾಪಿಸಿ ಹಿಮ್ಮೇಳ ಅಧ್ಯಯನ ಶಿಬಿರ ಮತ್ತು ಧ್ವನಿ ಸುರುಳಿ ನಿರ್ಮಾಣ, 'ಯಕ್ಷಗಾನದಲ್ಲಿ ಹಾಸ್ಯ' ಕಮ್ಮಟ, ಬಣ್ಣದ ಮಾಲಿಂಗರ ಅಭಿನಂದನೆ ಮತ್ತು 'ಬಣ್ಣ' ಸಂಸ್ಮರಣೆ ಗ್ರಂಥ ಪ್ರಕಟಣೆ, 'ಯಕ್ಷಗಾನದಲ್ಲಿ ಸ್ತ್ರೀವೇಷ', 'ಯಕ್ಷಗಾನದ ಮುನ್ನೋಟ' ಎಂಬ ವಿಚಾರ ಸಂಕಿರಣಗಳು ಇತ್ಯಾದಿ ಅನೇಕ ಕಾರ್ಯಕ್ರಮಗಳ ನೇತೃತ್ವವಹಿಸಿ ಯಶಸ್ವಿಯಾಗಿ ನಡೆಸಿದ್ದಾರೆ. 1990ರಲ್ಲಿ ಸುಳ್ಯ ತಾಲೂಕಿನಲ್ಲಿ ಸಾಕ್ಷರತಾ ಆಂದೋಲನದ ಕಾರ್ಯಕರ್ತರಾಗಿ 15 ಗ್ರಾಮ ಕೇಂದ್ರಗಳಲ್ಲಿ 'ಅಕ್ಷರವಿಜಯ' ಯಕ್ಷಗಾನ ಪ್ರದರ್ಶನಗಳನ್ನು ನಡೆಸಿದ್ದಾರೆ. ಜಿಲ್ಲೆಯ ವಿವಿಧೆಡೆಗಳಲ್ಲಿ ಜರಗಿದ ಯಕ್ಷಗಾನ ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿಯೂ ಭಾಗವಹಿಸಿದ್ದಾರೆ. ತೆಂಕುತಿಟ್ಟು ಯಕ್ಷಗಾನದ ನಾಟ್ಯಾಭ್ಯಾಸದ ಪಾಠಗಳನ್ನು ನಿರೂಪಿಸಿ, ಅದನ್ನು CDಗಳಲ್ಲಿ ಅಭ್ಯಾಸಿಗಳಿಗಾಗಿ ಒದಗಿಸಿದ್ದಾರೆ. ಈಗಾಗಲೇ ಈ CDಯನ್ನು ಬಳಸಿದ ಅಮೇರಿಕಾದ ವಾಷಿಂಗ್‌ಟನ್‌ನಲ್ಲಿರುವ ಯಕ್ಷವೃಂದವು ಬಭ್ರುವಾಹನ ಪ್ರಸಂಗವನ್ನು ಯಶಸ್ವಿಯಾಗಿ ಪ್ರದರ್ಶಿಸಿರುವುದು ಇದರ ಉಪಯುಕ್ತತೆಗೆ ಸಾಕ್ಷಿಯಾಗಿದೆ.

ಮಕ್ಕಳ ಯಕ್ಷಗಾನದಲ್ಲಿ ಸಾಕಷ್ಟು ಕೆಲಸ ಮಾಡಿರುವ ಡಾ. ದಾಮ್ಲೆಯವರು ಸುಳ್ಯದಲ್ಲಿ ಮಕ್ಕಳ ಮೇಳವನ್ನು ಸಂಘಟಿಸಿ ಲವ-ಕುಶ, ಕೃಷ್ಣಲೀಲೆ-ಕಂಸವಧೆ, ಬಭ್ರುವಾಹನ, ಪ್ರಹ್ಲಾದ ಚರಿತ್ರೆ ಮುಂತಾದ ಪ್ರಸಂಗಗಳನ್ನು ನಿರ್ದೇಶಿಸಿದ್ದಾರೆ. ಈ ಪ್ರದರ್ಶನಗಳಲ್ಲಿ ಸ್ವತಃ ಪದ್ಯ ರಚಿಸಿ ರೂಪಕಗಳ ಮೂಲಕ ವಿಸ್ತಾರವಾದ ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸುವ ಪ್ರಯೋಗಗಳನ್ನು ನಡೆಸಿದ್ದಾರೆ. ದೂರದರ್ಶನದಲ್ಲಿಯೂ ಇವರ ಮಕ್ಕಳ ಮೇಳದ ಪ್ರದರ್ಶನಗಳು ಪ್ರಸಾರವಾಗಿವೆ. ಇವರು ರಚಿಸಿದ 'ಓ ಲಕ್ಷ್ಮಣಾ.....'ಎಂಬ ಪ್ರಸಂಗವನ್ನು ದಿ| ದಾಮೋದರ ಮಂಡೆಚ್ಚರ ನಿರ್ದೇಶನದಲ್ಲಿ ಕರ್ನಾಟಕ ಮೇಳದವರು ಒಂದು ತಿರುಗಾಟದಲ್ಲಿ ಯಶಸ್ವಿಯಾಗಿ ಆಡಿದ್ದಾರೆ. ಇದಲ್ಲದೆ ಡಾ. ದಾಮ್ಲೆಯವರು 'ಸೋಮವಾರ ವ್ರತ ಮಹಾತ್ಮೆ' ಮತ್ತು 'ಮಣಿಮಲ್ಲಿಕಾ ಪರಿಣಯ' ಎಂಬ ಪ್ರಸಂಗಗಳನ್ನು ಈ ಮೊದಲೇ ರಚಿಸಿದ್ದಾರೆ. ಕಥೆಗಾರರಾಗಿ 'ನೇರ' ಕಥಾಸಂಕಲನ, 'ವಿದೇಶೀಯರ ದೇಶದಲ್ಲಿ' ಪ್ರವಾಸ ಕಥನ, ಜಾತ್ರೆಗಳ ಜಾನಪದೀಯ ಅಧ್ಯಯನ, ಗತಿಬಿಂಬ, ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶ ಮುಂತಾದ ಸಂಶೋಧನಾ ಕೃತಿಗಳನ್ನು ರಚಿಸಿರುವ ಡಾ. ದಾಮ್ಲೆಯವರು ಸಮಾಜಶಾಸ್ತ್ರ ವಿಷಯದಲ್ಲಿಯೂ ಸಂಶೋಧಕರಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಕರ್ನಾಟಕ ಸರಕಾರದಿಂದ ಅತ್ಯುತ್ತಮ ಕಾಲೇಜು ಶಿಕ್ಷಕ ರಾಜ್ಯ ಪ್ರಶಸ್ತಿಯ ಮೂಲಕ 1997ರಲ್ಲಿ ಗೌರವಿಸಲ್ಪಟಿರುವ ಡಾ. ಚಂದ್ರಶೇಖರ ದಾಮ್ಲೆಯವರು ಸುಳ್ಯದಲ್ಲಿ ಸ್ನೇಹ ಶಿಕ್ಷಣ ಸಂಸ್ಥೆಯನ್ನು ತನ್ನ ಸ್ನೇಹಿತರ ಬಳಗದೊಂದಿಗೆ ಸ್ಥಾಪಿಸಿ ಕನ್ನಡ ಮಾಧ್ಯಮದಲ್ಲಿ ಯಶಸ್ವಿ ಶಾಲೆಯೊಂದನ್ನು ನಡೆಸುತ್ತಿದ್ದಾರೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ವಿವಿಧ ಚಟುವಟಿಕೆಗಳು ಹಾಗೂ ಕಲಿಕಾ ಸೌಕರ್ಯಗಳನ್ನು ಒದಗಿಸಿರುವ ಈ ಶಾಲೆಯು ಈಗಾಗಲೇ ವಿದ್ಯಾಭಿಮಾನಿಗಳಿಂದ ಗುರುತಿಸಲ್ಪಟ್ಟಿದೆ.

ರಾಷ್ಟ್ರಕವಿ ಕುವೆಂಪುರವರು ರಚಿಸಿದ 'ಬೆರಳ್‌ಗೆ ಕೊರಳ್' ಎಂಬ ನಾಟಕದ ಆಶಯಕ್ಕೆ ಭಂಗ ಬಾರದಂತೆ ರಚಿಸಲಾದ ಈ ಪ್ರಸಂಗವನ್ನು ಆಸಕ್ತರಿಗೆ ರಂಗದಲ್ಲಿ ಅಳವಡಿಸಲು ಅನುಕೂಲವಾಗುವಂತೆ ಅರ್ಥಸಹಿತವಾಗಿ ಪ್ರಕಟಿಸಲಾಗಿದೆ. ಹಿರಿಯರ ತಂಡಗಳಿಗೂ ಕಾಲಮಿತಿಯ ಪ್ರಯೋಗ ನೀಡಲು ಇದು ಸೂಕ್ತವಾದ ಪ್ರಸಂಗ ಎಂಬುದಾಗಿ ನಮ್ಮ ನಂಬಿಕೆ. ನಮ್ಮ ಸಂಸ್ಥೆಯ ಚೊಚ್ಚಲ ಕೃತಿಯಾಗಿ ಇದನ್ನು ಸಾಹಿತ್ಯಾಸಕ್ತರ ಮುಂದಿಡಲು ಸಂತೋಷಪಡುತ್ತೇವೆ.

ಪ್ರಕಾಶಕರು

ಅರ್ಪಣೆ



ತೆಂಕುತಿಟ್ಟು ಯಕ್ಷಗಾನ ರಂಗದಲ್ಲಿ

ಅಪ್ರತಿಮ ಕಲಾವಿದನಾಗಿ ಮೆರೆದು

ಪೌರಾಣಿಕ ಪಾತ್ರಗಳ ಮನೋಧರ್ಮವನ್ನು ಸಾಕ್ಷಾತ್ಕರಿಸಿ

ನಿತ್ಯ ಶೋಧಕನಾಗಿ ದಿನೇ ದಿನೇ ನವೋ ಭವತಿ

ಜಾಯಮಾನ ಎಂಬಂತೆ ಸೃಜನಶೀಲ
ಅರ್ಥಗಾರಿಕೆಯಿಂದ

ಜನಸಾಮಾನ್ಯರಿಗೂ ಸಾಹಿತ್ಯ ಸಂಸ್ಕೃತಿಯ ಪಾಠ ಹೇಳಿದ

ಮಂಗಳೂರು ವಿಶ್ವವಿದ್ಯಾಲಯದಿಂದ

ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ

ಡಾ. ಶೇಣಿ ಗೋಪಾಲಕೃಷ್ಣ ಭಟ್ಟರಿಗೆ

ಹೃನ್ಮನದ ಸುಮವಾಗಿ ಭಕ್ತಿಪೂರ್ವಕ ಅರ್ಪಣೆ.

ಶ್ರೀ

ಗುರು ಗಣಾಧಿಪತಯೇ ನಮಃ

ಯಕ್ಷಗಾನ

ಏಕಲವ್ಯ

(ಬೆರಳ್‌ಗೆ ಕೊರಳ್)

ನಾಟಿ । ಅಷ್ಟತಾಳ

ಆದಿವಂದಿತ ವಿಘ್ನನಾಶಕ ಗಣಪನ ।
ಮೋದದೊಳರ್ಚಿಸಿ ಪೂಜಿಸುತ ॥
ಹಾದಿಯ ತೋರೆಂದು ಬೇಡುವೆ ದಿನದಿನ
ಆದರದಲಿ ಕಾವ್ಯ ರಚಿಸುವೆನು ॥೧॥

ಭಾಮಿನಿ

ವರಮಹಾಭಾರತದ ಕತೆಯೊಳು ।
ಪರಮ ಸದ್ಗುಣಿ ಏಕಲವ್ಯನು ।
ಗುರುಗೆ ದಕ್ಷಿಣೆ ನೀಡಿ ಬಲಿಪಶುವಾದ ಕತೆಯಿದನು ॥
ಬೆರಳ್‌ಗೆ ಕೊರಳೆಂದೆಂಬ ತತ್ವದ ।
ವರಕವಿ ಕುವೆಂಪುರಚಿಸಿದಗುಣ ।
ಭರಿತ ನಾಟಕವನ್ನು ಬರೆದೆನು ಯಕ್ಷಗಾನದೊಳು ॥

[ಥೈಕು ಥೈಕು ತತ್ತಾ ತರಿಗಿಟ ಧಿತ್ತ ಎಂಬುದಾಗಿ ಭಾಗವತರು ತಾಳ ಎತ್ತಿಕೊಟ್ಟಾಗ ರಂಗಸ್ಥಳದ ಎರಡು ಬದಿಗಳಿಂದ ಪಾಂಡವರು ಮತ್ತು ಕೌರವರ ಪ್ರವೇಶ. ಸಭಾಕ್ಲಾಸ್‌ನ ತಾಳಕ್ಕೆ ಕ್ರಮಪ್ರಕಾರ ಕುಣಿದು ಕೊನೆಗೆ ಎರಡು ಸಾಲುಗಳಲ್ಲಿ ಪಾಂಡವರು ಮತ್ತು ಕೌರವರು ಕುಳಿತುಕೊಳ್ಳಬೇಕು. ಅಲ್ಲಿಗೆ ದ್ರೋಣರು ಪ್ರವೇಶಿಸಿ ಪೀಠದ ಮೇಲೆ ನಿಂತಲ್ಲಿಗೆ ಪದ್ಯ.]

ರಾಗ ಕಾಂಬೋಧಿ । ಝಂಪೆ ತಾಳ

ಭಳಿರೆ ಗಜಪುರದರಸ ಕುವರರಿರ ನಿಮಗಿನ್ನು ।
ಬಲುವಿದ್ಯೆಗಳ ಕಲಿಸಲೆನುತ ॥
ಕುಲಪತಿ ಕೃಪಾಚಾರ್ಯ ಭೀಷ್ಮರೆಂದುದರಿಂದ ।
ಕಲಿಸುವೆನು ಶಸ್ತ್ರ ವಿದ್ಯೆಗಳ ॥೧॥

ದ್ರೋಣ : ಹಸ್ತಿನಾವತಿಯ ರಾಜಪುತ್ರರೇ, ಹಿರಿಯರಾದ ಭೀಷ್ಮಾಚಾರ್ಯರು ಹಾಗೂ ಕುಲಪತಿಗಳಾದ ಕೃಪಾಚಾರ್ಯರ ನಿವೇದನೆಯನ್ನೊಪ್ಪಿ ನಿಮಗೆ ಶಸ್ತ್ರಾಭ್ಯಾಸವನ್ನು ನೀಡುತ್ತಿದ್ದೇನೆ. ನಾನು ಕಲಿಸಿದ ಶಸ್ತ್ರ ವಿದ್ಯೆಯನ್ನು ಬಹಳ ಕೌಶಲ್ಯದಿಂದ ಕರಗತ ಮಾಡಿಕೊಳ್ಳುತ್ತಿರುವ ನಿಮ್ಮ ಜಾಣ್ಮೆಯನ್ನು ಕಂಡು ಸಂತೋಷಪಡುತ್ತಿದ್ದೇನೆ. ಉತ್ತಮರಾದ ಶಿಷ್ಯರಿದ್ದಲ್ಲಿ ಗುರುಗಳ ಸಾಮರ್ಥ್ಯವು ಪೂರ್ಣವಾಗಿ ಸ್ಫುಟಗೊಳ್ಳುವುದು ಎಂಬುದಕ್ಕೆ ನಮ್ಮ ಈ ಗರಡಿಯೇ ಸಾಕ್ಷಿಯಾಗಿದೆ. ಮಕ್ಕಳೇ, ವಿದ್ಯಾರ್ಥಿಯಾದವನು ತನ್ನ ಜ್ಞಾನಾರ್ಜನೆಯ ಪ್ರಯತ್ನದಲ್ಲಿ ಶರೀರವನ್ನೂ, ಬುದ್ಧಿಯನ್ನೂ ಸಮತೋಲನದಿಂದ ಪ್ರವರ್ತಿಸಬೇಕು. ಏಕೆಂದರೆ ಈ ಶರೀರ ಎಂಬುದು.........

ರಾಗ ಕಾಂಬೋಧಿ । ಝಂಪೆ ತಾಳ

ಈ ಶರೀರವ ಪ್ರಕೃತಿ ಧರ್ಮದಲಿ ಬೆಳೆಸಲಾ
ಕಾಶ ದೇವತೆಗಳನು ಸಸ್ಯ ॥
ರಾಶಿಯಂ ಭೂಮಿಯಂ ವಾಯುವಂ ಭಾವಿಸಲು ।
ಈಶನೊಲಿಯುವ ಮಾತು ಸತ್ಯ॥

ದ್ರೋಣ : ನನ್ನ ಪ್ರಿಯ ವಿದ್ಯಾರ್ಥಿಗಳೇ, ಪಂಚಭೂತಗಳಿಂದ ರೂಪುಗೊಂಡ ಈ ಶರೀರವು ಪ್ರಕೃತಿಯ ಒಂದು ಅವಿಭಾಜ್ಯ ಅಂಗವೆಂಬುದನ್ನು ನಾವು ಯಾವತ್ತೂ ಮರೆಯಬಾರದು. ಹಾಗಾಗಿಯೇ ನಮ್ಮ ಋಷಿಗಳು ಪ್ರಕೃತಿಯ ತತ್ತ್ವಗಳಲ್ಲಿಯೇ ದೇವರನ್ನು ಕಾಣುವ ಮಂತ್ರಗಳನ್ನು

ನಿರೂಪಿಸಿದರು. ಸೂರ್ಯ, ಚಂದ್ರ, ಆಕಾಶ, ನಕ್ಷತ್ರಗಳು, ಗಾಳಿ, ಭೂಮಿ, ನದಿ, ಸಮುದ್ರ ಮತ್ತು ಸಮಗ್ರ ಸಸ್ಯ ರಾಶಿಗಳು ಈ ಶರೀರದ ಸ್ವಾಸ್ಥ್ಯಕ್ಕೆ ಆಧಾರ ಭೂತವಾಗಿವೆ. ಹಾಗಾಗಿ ಎಲ್ಲರೂ ಯಶಸ್ಸನ್ನು ಸಾಧಿಸುವುದಕ್ಕಾಗಿ ಬ್ರಹ್ಮ ವರ್ಚಸ್ಸನ್ನು ಗಳಿಸುವ ಪ್ರಾರ್ಥನೆಯನ್ನು ಹೇಳುತ್ತೇನೆ. ನೀವೆಲ್ಲರೂ ಹೇಳಿ.

ಓಂ ಶಂನ್ನೋಮಿತ್ರಃ ಶಂ ವರುಣಃ । ಶಂನೋಭವತ್ವರ್ಯಮಾ
ಶಂನ ಇಂದ್ರೋ ಬೃಹಸ್ಪತಿಃ । ಶಂ ನೋ ವಿಷ್ಣು ರುರುಕ್ರಮಃ ।
ನಮೋ ಬ್ರಹ್ಮಣೇ । ನಮಸ್ತೇ ವಾಯೋ ।
ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।
ತ್ವಮೇವ ಪ್ರತ್ಯಕ್ಷಂ ಬ್ರಹ್ಮವದಿ ಶ್ಯಾಮಿ
ಋತಂ ವದಿಶ್ಯಾಮಿ । ಸತ್ಯಂ ವದಿ ಶ್ಯಾಮಿ
ತನ್ಮಾಮವತು । ತದ್ವಕ್ತಾರಮವತು ।
ಅವತುಮಾಂ । ಅವತುವಕ್ತಾರಂ ॥
ಸಹನೌ ಯಶಃ । ಸಹನೌ ಬ್ರಹ್ಮವರ್ಚಸಂ ।
ಓಂ ಶಾಂತಿಃ ಶಾಂತಿಃ ಶಾಂತಿಃ

ಮಕ್ಕಳೇ, ಇಂದಿನ ಶಸ್ತ್ರಾಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಬಯಲಿನ ಕಡೆಗೆ ತೆರಳೋಣ.

(ಶಬರ ಪಡೆಯ ನೃತ್ಯ ; ಮೂರು ವಿಧದ ಹೆಜ್ಜೆಗಾರಿಕೆ. ಬೇಟೆ)

ರಾಗ ಮುಖಾರಿ । ಏಕತಾಳ

ಬೇಟೆಯಾಡುತ್ತ ಬಂದನಾಗ । ಶಬರ ಬಚ್ಚ । ಬೇಟೆಯಾಡುತ್ತ ಬಂದನಾಗ ॥
ದುಷ್ಟ ಮೃಗಂಗಳ ಲಟ್ಟುತ ಲೋಡುತ ।
ಕಷ್ಟಕೆ ಸಿಲುಕುತಲೆಂದನು ಪಿತನೊಳು ॥ಗ॥

ಶಬರ : ಮಗನೇ ಬಚ್ಚ, ಬೇಟೆಗಾರರೆಲ್ಲಾ ಎಲ್ಲಿದ್ದಾರೋ ?
ಬಚ್ಚ : ಅಪ್ಪಾ, ಇಲ್ಲೇ ಇದ್ದಾರಪ್ಪಾ.
ಶಬರ : ಏನ್ಮಾಡ್ತಾರೋ ಅವ್ರು
ಬಚ್ಚ : ಸುಮ್ನೆ ಬರಿಗೈಯಲ್ಲಿ ನಿಂತಾರೆ ಅಪ್ಪ.
ಶಬರ : ಯಾಕ್ಲಾ ಬರಿಗೈಯಲ್ಲಿ ನಿಂತಾರೆ. ಪ್ರಾಣಿ ಹೊಡೀಲಿಕ್ಕೆ ನಿಮ್ಗೇನಾಗೈತೋ ಧಾಡಿ?

(ಹೀಗೆಯೇ ಎಲ್ಲರನ್ನೂ ನೋಡಿ ಕೇಳುವನು. ಏನಾದರೊಂದು ಉತ್ತರ ಹೇಳುತ್ತಾರೆ.)

ಬಚ್ಚ : ಅಪ್ಪಾ, ನನ್ನದೊಂದು ಬಿನ್ನಹವನ್ನು ಹೇಳಲೇ ?

ರಾಗ | ನವರೋಜು | ಏಕತಾಳ

ಅಪ್ಪಯ್ಯಾ ಮಿಗವೆಲ್ಲ | ಕೈ| ತಪ್ಪುವವು ಸಿಗದಲ್ಲ ||
ಬಗೆ ಬಗೆ ಶರಗಳ ನೆಳೆದೆಸೆದರು ಖಳ |
ಮೃಗಗಳ ಕೊಲ್ಲದೆ ಬಸವಳಿಯುವೆ ನೈ ||೧||

ಬಚ್ಚ : ಅಪ್ಪಾ, ಕಾಡಿನ ಸಾಧು ಪ್ರಾಣಿಗಳನ್ನು ಕೊಲ್ಲಬಾರದೆಂಬ ನಿಯಮ ನಮ್ಮದು. ಕ್ರೂರವಾದ ಮೃಗಗಳನ್ನು ಬೇಟೆಯಾಡುವುದರಿಂದ ಸಾಧು ಪ್ರಾಣಿಗಳ ಜೀವ ಭಯವೂ ಕಮ್ಮಿಯಾಗುತ್ತದೆ. ಆದರೆ ನಮ್ಮ ಆಯುಧಗಳಿಗೆ ಸುಲಭವಾಗಿ ಸಿಕ್ಕುವುದು ಸಾಧು ಪ್ರಾಣಿಗಳೇ. ದುಷ್ಟ ಮೃಗಗಳು ಬೇಗನೇ ತಪ್ಪಿಸಿಕೊಳ್ಳುತ್ತವೆ. ಅಂತಹ ಮೃಗಗಳನ್ನು ದೂರದಿಂದಲೇ ಕೊಲ್ಲುವ ಚಾಕಚಕ್ಯತೆ ಇಲ್ಲದೆ ನಮಗೆ ಬೇಟೆಯೆಂಬುದು ಕೇವಲ ಒದ್ದಾಟವೇ ಆಗುತ್ತದಪ್ಪಾ.

ಶಬರ : ನೀನು ಹೇಳಿದ್ದು ಅರ್ಥವಾಯ್ತು ಮಗಾ, ಆದರೆ ಕಂದಾ,

ಸುರುಟಿ | ಏಕತಾಳ

ಕಂದನೆ ತಿಳಿಬೇಕು | ನಮ್ಮದು ಹಿಂದುಳಿದಿಹ ಬದುಕು ||
ಮುಂದುವರಿದ ಜನ ಹೊಂದಿಹ ವಿದ್ಯೆಯ |
ನೆಂದಿಗು ಪಡೆಯಲು ನಮ್ಮಿಂದಾಗದು ||೧||

ಶಬರ : ಮಗಾ, ನಾವೆಲ್ರೂ ಕಾಡಿನ ಜನಗಳು. ನಮ್ಮದೇನಿದ್ರೂ ಇಲ್ಲೇ ಕಲ್ತ ವಿದ್ಯೆ. ಇಲ್ಲೇ ತಯಾರ್ಸಿದ ಆಯುಧ. ಬೇಟೆ ಆಡ್ತಾಗಲೇ ಅಭ್ಯಾಸ. ಇದಕ್ಕಿಂತ ಹೆಚ್ಚಿಗೇನನ್ನೂ ಮಾಡಾಕಾಗಾಕಿಲ್ಲ ಮಗಾ. ನಾಡ್‌ನಲ್ಲಾದರೆ ಜನ ಮುಂದುವರ್ದಿದ್ದಾರೆ. ಗರಡಿ ಮನೆಗಳಲ್ಲಿ ಶಸ್ತ್ರಾಭ್ಯಾಸ ಮಾಡ್ತವ್ರೆ. ಮಂತ್ರಾಸ್ತ್ರಗಳನ್ನು ಪ್ರಯೋಗಿಸ್ತವ್ರೆ. ಅಂಥದ್ದೆಲ್ಲಾ ಕಲ್‌ತ್ರೆ ದುಷ್ಟ ಮೃಗಗಳನ್ನು ದೂರದಿಂದಲೇ ಹೊಡೀಬೋದು ಮಗಾ. ಆದ್ರೆ ಹಿಂದುಳಿದ ಜನಾಂಗದವ್ರಿಗೆ ಅಂಥಾ ದೊಡ್ಡ ದೊಡ್ಡ ವಿದ್ಯೆ ಯಾವತ್ತಿಗೂ ಸಿಗಾಕ್ಕಿಲ್ಲಾ ಮಗಾ.

ಬಚ್ಚ : ಹೀಗೆನ್ನುತ್ತೀರಾ ಅಪ್ಪಾ ? ಆದರೆ ನಾನು ಅಂತಹ ವಿದ್ಯೆ ಪಡೆಯೋ ಪ್ರಯತ್ನ ಮಾಡ್ತೇನಪ್ಪಾ, ಆದ್ದರಿಂದ ನನಗೆ ಹೇಳ್‌ಬೇಕಪ್ಪಾ.

ಸೌರಾಷ್ಟ್ರ / ರೂಪಕ +ಏಕ +ತ್ರಿತ್ರಿತ್ರೈ

[illegible] ಪೇಳಯ್ಯ | ಗೂಢ ವಿದ್ಯೆಯ | ಧನುವ ಶಾಸ್ತ್ರವ | ತಿಳಿದ ನಾರವ ||
[illegible] ನಿಲ್ಲದು | ತಡೆಯದೆನ್ನನು | ಜನಕ ಕಳುಹಿಸು | ಹಟದಿ ಕಲಿವೆನು ||

[illegible] : ಅಪ್ಪಾ, ಹಿಂದುಳಿದವರೆಂದು ಸುಮ್ಮನೆ ಕುಳಿತರೆ ಯಾವತ್ತಿಗಾದರೂ ಮುಂದುವರಿಯಲು ಸಾಧ್ಯವೇ ಅಪ್ಪಾ. ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಯುವುದರಿಂದ ನಾವು ಮುಂದುವರಿಯುವೆವಾದರೆ ನಾವೇಕೆ ಪ್ರಯತ್ನಿಸಬಾರದು ? ವಿದ್ಯೆಯೆಂಬ ಬೆಳಕಿನಲ್ಲಿ ನಾವೇಕೆ ಹೊಸ ಹೆಜ್ಜೆ ಇಡಬಾರದು ? ಅಪ್ಪಾ, ನನಗೆ ಹೇಳು - ಧನುರ್ವೇದ ಪಂಡಿತರು ಯಾರಿದ್ದಾರೆ ? ಎಲ್ಲಿದ್ದಾರೆ ? ಅವರ ಸೇವೆಯನ್ನು ಮಾಡಿ ಗೂಢವಾಗಿರುವ ವಿದ್ಯೆಯನ್ನು ನಾನು ಹಟದಿಂದ ಕಲೀತೇನಪ್ಪಾ.

[illegible] : ನಿನಗದೆಲ್ಲಾ ಬೇಡ ಮಗಾ. ನನ್ಗೆ ನೀನೊಬ್ನೇ ಮಗ.

[illegible] : ಹೌದು ಮಗಾ, ನೀನು ಎಲ್ಲೆಲ್ಲಿಗೆ ಹೋಗಿ ವಿದ್ಯೆ ಕಲಿಯೋದು ಬೇಡ. ಅಪ್ಪನತ್ರ ಕಲ್ತದ್ದು ಸಾಕು.

[illegible] : ಅಮ್ಮಾ, ನನ್ನನ್ನು ತಡೆಯಬೇಡ. ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಒಂದಿಷ್ಟು ದಿನ ಮನೆಯಿಂದ ದೂರವಿರಬೇಕು. ಅಪ್ಪಾ, ನನ್ನ ಮೇಲೆ ವಿಶ್ವಾಸವಿಟ್ಟು ಕಳುಹಿಸಪ್ಪಾ.

[illegible] : ನಿನ್ನ ಮೇಲೆ ವಿಶ್ವಾಸವುಂಟು ಮಗಾ. ಆದ್ರೆ ನಿನ್ನ ಆಸೆ ಈಡೇರ್ಲಿಕ್ಕಿಲ್ಲಾ ಮಗಾ. ಅವರು ಬ್ರಾಹ್ಮಣರು. ರಾಜವಂಶದ ಕ್ಷತ್ರಿಯರ್ಗೇ ಕಲಿಸ್ತಾರೆ. ಕೆಳಜಾತಿಯ ಈ ವ್ಯಾಧನ ಮಗನಿಗೆ ಕಲಿಸ್ಲಿಕ್ಕಿಲ್ಲಾ ಮಗಾ. ಗಹಗಹಿಸಿ ನಕ್ಕು ನಿನ್ನನ್ನು ಹೊರ ದಬ್ಬ್ಯಾರು ಮಗಾ.

[illegible] : ಇಲ್ಲಪ್ಪಾ. ನಿಜದ ಬಿಲ್ಲೋಜರು ಹಾಗೆ ಮಾಡರು. ಹಾಗೊಂದು ವೇಳೆ ಮಾಡಿದರೂ ನಾನು ಅವರ ಕಾಲು ಹಿಡೀತೇನೆ, ಸೇವೆ ಮಾಡ್ತೇನೆ. ಹೇಗಾದರೂ ಮಾಡಿ ಮನವೊಲಿಸ್ತೇನೆ. ಆಮೂಲಾಗ್ರವಾಗಿ ಧನುರ್ವೇದವನ್ನು ಕಲಿತೇ ಬರುತ್ತೇನೆ.

[illegible] : ಮಗಾ ನೀನಿಷ್ಟು ಹಟ ಮಾಡುವಾಗ ಇನ್ನೇನು ಹೇಳಲಿ. ಹೋಗಿ ಬಾ ಕಂದ ನಿನಗೆ ಶುಭವಾಗಲಿ. [ಬಚ್ಚ ನಮಸ್ಕರಿಸಿ ಕುಳಿತಿರುತ್ತಾನೆ. ಹಿರಿಯರು ಆಶೀರ್ವದಿಸಿ ಹೋದ ಬಳಿಕ ತ್ರೈತತಕತದಲ್ಲಿ ನಿರ್ಗಮನ]

(ಸಮಯದ ಅಭಾವವಿದ್ದಾಗ ಅಥವಾ ಪಾತ್ರಧಾರಿಗಳು ಸಾಕಷ್ಟು ಮಂದಿ ಇಲ್ಲದಿದ್ದಾಗ ಶಬರ, ಶಬರಿ, ಬೇಟೆಗಾರರು, ಬೇಟೆ ಇತ್ಯಾದಿ ಭಾಗವನ್ನು ಬಿಟ್ಟು ನೇರವಾಗಿ ಬಚ್ಚ (ಏಕಲವ್ಯ)ನಿಗೆ ಪ್ರವೇಶ ಕೊಡಬಹುದು. ಹಾಗೆ ಮಾಡುವುದಾದರೆ ಈ ಕೆಳಗಿನ ಪದ್ಯ ಮತ್ತು ಅರ್ಥವನ್ನು ಅಳವಡಿಸಿಕೊಳ್ಳಬಹುದು.

ರಾಗ ಸೌರಾಷ್ಟ್ರ । ಏಕ ತಾಳ

ಜನಕ ನನ್ನೊಡ ಬಡಿಸಿ ಬಚ್ಚನು । ಧನುವಿ ಶಾರದನಾಗಲೆನುತಲಿ ।
ಮನದಿಯೋಚಿಸಿ ಬಂದು ಹಸ್ತಿನ । ಪುರದಿನಿಂದ ॥ ೧॥

ಓಂ ಗುರುಭ್ಯೋ ನಮಃ ॥ ಸದ್ಗುರುಗಳನ್ನು ಹುಡುಕಿಕೊಂಡು ಹೊರಟವನು ನಾನು. ಕಾಡಿನ ಜನರ ಮುಖ್ಯಸ್ಥನೇ ನನ್ನ ಅಪ್ಪ. ನನ್ನ ಹೆಸರು ಬಚ್ಚ. ಓರಗೆಯ ಗೆಳೆಯರೊಂದಿಗೆ ಆಟವಾಡುತ್ತೇನೆ. ಬೇಟೆಯಾಡುತ್ತೇನೆ. ಆದರೆ ಈ ಬದುಕಿನಲ್ಲಿ ಬದಲಾವಣೆಯೂ ಇಲ್ಲ, ಬೆಳವಣಿಗೆಯೂ ಇಲ್ಲ. ಹಾಗಾಗಿ ಧನುರ್ವಿದ್ಯಾ ಪಾರಂಗತನಾಗಬೇಕೆಂಬ ಆಸೆಯನ್ನು ಅಪ್ಪನಲ್ಲಿ ನಿವೇದಿಸಿದೆ. ಕಲಿಸಿಕೊಡಲು ಮಹಾಗುರು ದ್ರೋಣಾಚಾರ್ಯರಿದ್ದಾರೆ. ಆದರೆ ಅವರು ನಿನ್ನನ್ನು ವಿದ್ಯಾರ್ಥಿಯಾಗಿ ಸೇರಿಸಿಕೊಳ್ಳಲಾರರು ಎಂದು ಹೇಳಿದರು ಅಪ್ಪ. ಆದರೆ ನಾನು ಹಟಮಾಡಿದೆ. ಗುರುವಿನ ಮನಸ್ಸನ್ನು ಗೆಲ್ಲುತ್ತೇನೆಂದು ಹೇಳಿದೆ. ಕೊನೆಗೂ ಅಪ್ಪ-ಅಮ್ಮನಿಂದ ಒಪ್ಪಿಗೆ ಪಡೆದು ನೇರವಾಗಿ ಹಸ್ತಿನಾವತಿಗೆ ಬಂದೆ. ಅವರಿವರಲ್ಲಿ ವಿಚಾರಿಸಿದಾಗ ಅದೇ ದ್ರೋಣಚಾರ್ಯರ ಮನೆಯೆಂದು ತಿಳಿಯಿತು. ಅಲ್ಲಿಗೇ ಧಾವಿಸುತ್ತೇನೆ.)

[ಮುಂದಿನ ಪದ್ಯದ ಬಿಡ್ತಿಗೆಗೆ ದ್ರೋಣ ಅಶ್ವತ್ಥಾಮರ ಪ್ರವೇಶ]

ರಾಗ । ಸೌರಾಷ್ಟ್ರ । ತ್ರಿವುಡೆ

ಮಗನೆ ಕೇಳ್ಳೆ ಚಾಪ ಕೌಶಲ । ಮಿಗುವಡೆಯೆ ಗುರಿ ಸೂಕ್ಷ್ಮಗ್ರಹಿಕೆಯು ।
ಬಿಗುತನದಿ ಮಾಡೆಂದು ಪೇಳ್ದನು । ಸೊಗಸಿನಿಂದ ॥

ದ್ರೋಣ : ಮಗೂ ಅಶ್ವತ್ಥಾಮ........(ಅಪ್ಪಾ) ಚಾಪ ವಿದ್ಯೆಯಲ್ಲಿ ಗುರಿ ಸೂಕ್ಷ್ಮತೆಯೇ ಪ್ರಧಾನವಾದುದು. ಇದಕ್ಕೆ ಶರೀರ ಸ್ವಾಸ್ಥ್ಯವೂ ಅಂಗ ಶುದ್ಧಿಯೂ ಮುಖ್ಯ. ನಿಂತ ನಿಲುವು ಭದ್ರವಾಗಿರಬೇಕು. ಎತ್ತಿದ ಬಿಲ್ಲು, ಬಾಣಕ್ಕೆ ಸರಿಯಾದ ನೆಲೆಯನ್ನೊದಗಿಸಬೇಕು. ಕಣೆಯ ಆಯವು ನಿಶ್ಚಿತ ಗುರಿಗೆ ಸಮ್ಮುಖವಾಗಿರಬೇಕು. ಇನ್ನೀಗ ಮನಸ್ಸಿನ ಏಕಾಗ್ರತೆಯ ವಿಷಯ. ಗುರಿಯನ್ನು ಏಕಾಗ್ರ ಚಿತ್ತದಿಂದ ದಿಟ್ಟಿಸಲು ಸಾಧ್ಯವಾಗಬೇಕು.

[illegible] ಹಾರುವ ಹಕ್ಕಿಗೆ ಗುರಿಯಿಟ್ಟೆಯಾದರೆ ಹಕ್ಕಿಯ ಗತಿಯೊಂದಿಗೆ ನಿನ್ನ ದೃಷ್ಟಿ ಧಾವಿಸಬೇಕು. ಅದೋ ಗಾಳಿಗೆ ಆ ಎಲೆ ಅದುರುತ್ತಿದೆ. ಏಕಾಗ್ರತೆಯಿದ್ದರೆ ಬಾಣವೆಸೆದು ಅದರ ತೊಟ್ಟನ್ನಷ್ಟೇ ಕಡಿಯಬಹುದು. ಈ ಅಭ್ಯಾಸವನ್ನು ನೀನು ಮುಂದುವರಿಸಬೇಕು. (ತರಿಕಿಟ ಕಿಟತಕ ಧಿಂ- ಈ ತಾಳ ನಾಟ್ಯದಲ್ಲಿ ಯುದ್ಧಾಭ್ಯಾಸ ಮಾಡುವುದು. ಮುಕ್ತಾಯಕ್ಕಾಗುವಾಗ ಅಲ್ಲಿಗೆ ಬಂದು ನಿಂತ ಬಚ್ಚನನ್ನು ದ್ರೋಣ ನೋಡುತ್ತಾನೆ. ತಕ್ಷಣವೇ ಬಚ್ಚ ಕಾಲಿಗೆ ಬೀಳುತ್ತಾನೆ. ಆತನನ್ನೆಬ್ಬಿಸಿ ದ್ರೋಣ ಮಾತನಾಡಿಸುತ್ತಾನೆ.] ಯಾರು? ಯಾರು ನೀನು?

ರಾಗ ಸಾರಂಗ । ಅಷ್ಟತಾಳ

ಯಾರು ನೀನೆಲೆ ಕುವರ । ನೋಡಲು ಕಾಡಿ ।
ನೂರಿನ ಬಲು ಸುಂದರ ॥
ನೇರ ನೋಟದಿ ಶಸ್ತ್ರಾಭ್ಯಾಸವ ಪರಿಕಿಪ ।
ಕಾರಣವೇನಯ್ಯ ಯಾರು ಕಳುಹಿದರು ॥

ದ್ರೋಣ : ಓ ಅಪರಿಚಿತನಾದ ಬಾಲಕಾ, ನೋಡಿದರೆ ನೀನು ಕಾಡಿನ ವ್ಯಾಧರ ಕುಲಜಾತನೆಂಬುದು ಸ್ಪಷ್ಟ. ಆದರೆ ಕಾಣುವುದಕ್ಕೆ ಬಹಳ ಸುಂದರ ಹುಡುಗ. ಅಷ್ಟೇ ಅಲ್ಲ, ನಿನ್ನ ಕಣ್ಣಿನಲ್ಲಿ ತುಂಬಿರುವ ಕುತೂಹಲವು ಹೃದಯದ ಆಸೆಯನ್ನು ಬಿಂಬಿಸುತ್ತದೆ. ನನ್ನ ಮಗ ಅಶ್ವತ್ಥಾಮನಿಗೆ ಶಸ್ತ್ರಾಭ್ಯಾಸ ಮಾಡಿಸುವುದನ್ನು ಎವೆಯಿಕ್ಕದೆ ನೋಡುವ ನಿನ್ನ ಆಸಕ್ತಿಯ ಮೂಲವೇನು ? ಯಾರು ನಿನ್ನನ್ನು ಕಳಿಸಿದರು ? ಯಾಕಾಗಿ ಬಂದೆ. ಸವಿಸ್ತಾರವಾಗಿ ಹೇಳು.

ಏಕಲವ್ಯ : ಜೀಯ, ಲಾಲಿಸಬೇಕು.

ರಾಗ ಮಧು ಮಾಧವಿ । ತ್ರಿಪುಟತಾಳ

ಪರಮಗುರುಗಳೆ ನಿಮ್ಮ ಚರಣಕೆ ।
ಶಿರವ ಬಾಗುತ ಬೇಡುವೆನುಧನು ।
ಶರದ ವಿದ್ಯೆಯ ಕಲಿಸುತೆನ್ನನು ।
ಪೊರೆಯ ಬೇಕೈ ದೇವನೆ ॥೧॥

ಏಕಲವ್ಯ : ಸ್ವಾಮಿ, ನಾನೇನೂ ಪ್ರಪಂಚವನ್ನು ತಿಳಿದವನಲ್ಲ. ಕಾಡಿನಲ್ಲಿರುವ ನನ್ನ ಅಪ್ಪನಿಗೂ ನಾಡಿನ ವಿಚಾರಗಳು ಗೊತ್ತಿಲ್ಲ. ನಮಗೆ ಗೊತ್ತಿರುವುದೊಂದೇ ಸತ್ಯ. ಅದೇನೆಂದರೆ ನೀವೊಬ್ಬರು ಪರಮಗುರುಗಳು. ಧನುರ್ವಿದ್ಯಾ

ವಿಶಾರದರು. ಇಂದಿನ ಯುಗದಲ್ಲಿ ನಿಮ್ಮನ್ನು ಮೀರಿಸಬಲ್ಲ ಶರಪಂಡಿತರಿಲ್ಲ. ನಿಮ್ಮಿಂದ ಬಿಲ್ವಿದ್ಯೆಯನ್ನು ಕಲಿಯುವ ಅವಕಾಶ ಸಿಕ್ಕಿದರೆ ಅದೇ ಬದುಕಿನ ಭಾಗ್ಯ. ನನಗೆ ಅಂತಹ ಅವಕಾಶವನ್ನು ನೀಡಿ ಉದ್ಧರಿಸಬೇಕು. ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಬೇಕು.

ದ್ರೋಣ : (ನಗುತ್ತ) ಮಗೂ ನಿನ್ನ ಹೆಸರೇನು ?

ಬಚ್ಚ : ಮನೆಯಲ್ಲಿ ನನ್ನನ್ನು ಬಚ್ಚನೆಂದು ಕರೆಯುತ್ತಾರೆ.

ದ್ರೋಣ : ಇರಲಿ, ಬಚ್ಚ. ನಿನ್ನ ಈ ಬಿಲ್ವಿದ್ಯೆಯನ್ನು ಕಲಿಯುವ ಆಸಕ್ತಿಯ ಮೂಲವೆಲ್ಲಿ ?

ಬಚ್ಚ : ನನ್ನ ಹೃದಯದಲ್ಲಿ.

ದ್ರೋಣ : ಇಲ್ಲಿಗೆ ಕಳಿಸಿಕೊಟ್ಟವರಾರು ?

ಬಚ್ಚ : ಅಪ್ಪ ಅಮ್ಮನನ್ನು ಒಪ್ಪಿಸಿ ನಾನೇ ಬಂದೆ.

ದ್ರೋಣ : ನಿನಗೇಕೆ ಬಿಲ್ವಿದ್ಯೆ ? ಏತಕ್ಕೆ ಈ ಉನ್ನತಜ್ಞತೆ ?

ಬಚ್ಚ : ಬದುಕಿಗೆ ಒಂದು ಅರ್ಥವನ್ನು ಕಾಣುವುದಕ್ಕೆ, ಸಾಧು ಪ್ರಾಣಿಗಳ ರಕ್ಷಣೆಗೆ, ಸಾಧ್ಯವಾದಷ್ಟು ಲೋಕೋಪಕಾರಕ್ಕೆ.

ದ್ರೋಣ : ಮೆಚ್ಚಿದೆ.

ನವರೋಜು । ಏಕತಾಳ ।

ಮೆಚ್ಚಿದೆ ನಾ ನೆಲೆಕುವರ । ನಿನ್ನ । ಹೆಚ್ಚಿನ ಭಕ್ತಿಗೆ ಪೋರ ॥
ಇಚ್ಛೆಯ ಸಲಿಸುವೆ ಬಚ್ಚನೆಂದೆನದಿರು ।
ಹಚ್ಚುವೆ ಪೆಸರೇಕಲವ್ಯನುಯೆನುತ ॥೧॥

ದ್ರೋಣ : ಮೆಚ್ಚಿದೆ, ಬಚ್ಚ, ಮೆಚ್ಚಿದೆ. ಒಬ್ಬ ವಿದ್ಯಾರ್ಥಿಯಲ್ಲಿ ಇರಬೇಕಾದ ಆಸಕ್ತಿ ಮತ್ತು ಸಂಸ್ಕೃತಿಗಳೆರಡೂ ನಿನ್ನಲ್ಲಿವೆ. ಶಿಕ್ಷಣದ ಅವಕಾಶ ಕೊಡದೆ ನಿನ್ನನ್ನು ತಿರಸ್ಕರಿಸುವುದಕ್ಕೆ ಯಾವ ಕಾರಣವೂ ಇಲ್ಲ. ಇರಲಿ, ಇಲ್ಲಿ ನಿನ್ನನ್ನು ಗುರುತಿಸಲು ಬೇರೊಂದು ಹೆಸರಿಡುತ್ತೇನೆ. ಇನ್ನು ಮುಂದೆ ನೀನು ಬಚ್ಚನಲ್ಲ. ನಿನ್ನ ಹೊಸ ಹೆಸರು ಏಕಲವ್ಯ. ಅಶ್ವತ್ಥಾಮಾ, ನೋಡಿದೆಯಾ ? ಗುರುವು ವಿದ್ಯಾರ್ಥಿಯಲ್ಲಿ ಅಪೇಕ್ಷಿಸುವ ವಿನಯ, ಸೌಜನ್ಯ ಮತ್ತು ಪ್ರಶಾಂತತೆ ಈತನಲ್ಲಿದೆ. ಈತನನ್ನು ನಿನ್ನ ಗೆಳೆಯನಂತೆ ಕಾಣು. ಇಂದೇ ಗರಡಿಗೆ ಕರಕೊಂಡು ಹೋಗಿ ರಾಜಪುತ್ರರಿಗೆ ಪರಿಚಯಿಸು. ಅಷ್ಟರಲ್ಲಿ ನಾನು ಅಲ್ಲಿಗೆ ತಲುಪುತ್ತೇನೆ.

ಅಶ್ವತ್ಥಾಮ : ಆಗಲಿ ಅಪ್ಪಾ. ಏಕಲವ್ಯಾ ಬಾ. ಗರಡಿಗೆ ಹೋಗೋಣ.

(ಇಬ್ಬರೂ ನಮಸ್ಕರಿಸಿ ತ್ರೈತತಕತದಲ್ಲಿ ನಿರ್ಗಮನ -ದ್ರೋಣರೂ ನಿರ್ಗಮಿಸುತ್ತಾರೆ.)
(ತ್ರೈತತಕತ ತಾಳದಲ್ಲಿ ಪಾಂಡವರ ಕೌರವರ ಪ್ರವೇಶ. ಅದೇ ರೀತಿ ಅಶ್ವತ್ಥಾಮ ಮತ್ತು ಏಕಲವ್ಯ ರಂಗಸ್ಥಳದ ನಡುವಿಗೆ ಪ್ರವೇಶಿಸಬೇಕು)

ಕೌರವ : ಗುರುಪುತ್ರಾ...

ರಾಗ ಮಧು ಮಾಧವಿ । ತ್ರಿವುಡ ತಾಳ

ಗುರುಜ ಪೇಳ್ಳೆ ಯಾರ ನಿಲ್ಲಿಗೆ । ಕರೆದು ತಂದಿಹೆಯೆಂದು ಕೌರವ ।
ಗರುವದಿಂದಲಿ ಕೇಳಲೀರ್ವರು । ಗುರುತ ಪೇಳ್ದರು ವಿನಯದಿ॥

ಕೌರವ : ಗುರುಪುತ್ರಾ, ನಮ್ಮ ಈ ರಾಜಗರಡಿಯಲ್ಲಿ ನಿನಗೆ ಯಾವಾಗ ಬೇಕಿದ್ದರೂ ಬಂದು ಹೋಗುವ ಸ್ವಾತಂತ್ರ್ಯವಿದೆ. ಆದರೆ ಇಂದು ಯಾರನ್ನು ಇಲ್ಲಿಗೆ ಕರೆ ತಂದಿರುವೆ.?

ಭೀಮ : ವೇಷದಿಂದಲೂ ವರ್ಣದಿಂದಲೂ ಈತ ಕ್ಷತ್ರಿಯ ಕುಮಾರನಲ್ಲವೆಂಬುದನ್ನು ಯಾರೂ ಹೇಳಬಹುದು.ಇಂತಹವನನ್ನು ಕರೆತರಲು ಏನು ಧೈರ್ಯವೋ ನಿನಗೆ?

ಅಶ್ವತ್ಥಾಮ : ನಾನಾಗಿಯೇ ಕರೆತಂದುದಲ್ಲ. ಗುರುಗಳೇ ನನ್ನೊಡನೆ ಕಳಿಸಿದರು.

ದುಶ್ಶಾಸನ : ಅರಮನೆಗೆ ತಿಳಿಯದಂತೆ ಗುರುಗಳು ಈತನನ್ನು ಗರಡಿಗೆ ಸೇರಿಸಿದರೆ? ಅವರಿಗೆ ಅಷ್ಟೂ ಅಧಿಕಾರವಿದೆಯೇ?

ಧರ್ಮರಾಯ : ಅಶ್ವತ್ಥಾಮಾ, ಈತ ಯಾರು ? ಯಾಕೆ ಬಂದಿದ್ದಾನೆ? ಗುರುಗಳು ಇಲ್ಲಿಗೆ ಕಳಿಸಿದ್ದಾದರೂ ಯಾಕೆ?

ಅಶ್ವತ್ಥಾಮ: ಈತ ಧನುರ್ವಿದ್ಯಾ ಪಾರಂಗತನಾಗಲು ಬಂದ ಬೇಡರ ಹುಡುಗ. ಹೆಸರು ಏಕಲವ್ಯ.

ಅರ್ಜುನ : ಹೌದೇ ? ಇವನಿಗೂ ಧನುರ್ವಿದ್ಯೆಯೇ?

ರಾಗ ಸೌರಾಷ್ಟ್ರ । ತ್ರಿವುಡೆ ತಾಳ

ಕನಲುತೆಂದನು ಪಾರ್ಥನಾಕ್ಷಣ । ವನಚರರಿಗೇತಕ್ಕೆ ವೇದವು।
ಮನೆಯೊಳಿರುವುದು ಯೋಗ್ಯ ನಡೆನಡೆ । ಯೆನಲು ಗುರುವು॥

ಅರ್ಜುನ : ಗುರುಪುತ್ರಾ, ಇವನು ನಿನ್ನೊಂದಿಗೆ ಬಂದಿರುವ ಕಾರಣದಿಂದಾಗಿ ಇಷ್ಟು ಹೊತ್ತು ಇಲ್ಲಿ ನಿಲ್ಲುವುದಕ್ಕಾದರೂ ಅವಕಾಶ ಸಿಕ್ಕಿತು. ಇಲ್ಲವಾದರೆ ಇಷ್ಟರಲ್ಲೇ ಹೊರಗೆ ಅಟ್ಟಲ್ಪಡುತ್ತಿದ್ದ. ಏನು ? ಕಾಡಿನಲ್ಲಿರಬೇಕಾದ ಬೇಡರ ಹುಡುಗನಿಗೆ ಧನುರ್ವಿದ್ಯೆ ಕಲಿಯುವ ಆಸೆಯೇ ? ಹೆಳವನಿಗೇಕೆ ಪರ್ವತವನ್ನೇರುವ ಹವಣಿಕೆ? ಈ ರಾಜಪುತ್ರರ ಮಧ್ಯೆ ಕಲೆತು ಕೇವಲ

ಕಲಿಯುವ ಯೋಚನೆಯಾದರೂ ಬಂತಲ್ಲಾ ಈತನಿಗೆ? ಇಲ್ಲಿ ಇದ್ಯಾವುದಕ್ಕೂ ಅವಕಾಶವಿಲ್ಲ. ಎಲಾ ಏಕಲವ್ಯ, ನಡೆ ನಡೆ, ತಕ್ಷಣ ಇಲ್ಲಿಂದ ಹೊರನಡೆ. (ದ್ರೋಣ ಪ್ರವೇಶಿಸಿ)

ದ್ರೋಣ : ಅರ್ಜುನಾ, ತಡೆ ತಡೆ.

ರಾಗ ಕೇದಾರಗೌಳ । ಅಷ್ಟತಾಳ(ತ್ರಿತ್ರತ್ರೆ)

ತಡೆ ತಡೆಯರ್ಜುನ ಖತಿಗೊಳು ತಿಹೆಯೇಕೆ।
ಹುಡುಗನು ಕಡು ಜಾಣನು ॥
ತೊಡಗುವ ನಿಮ್ಮುಪಕಾರಕೆ ಮುಂದಿನ್ನು ।
ಬಿಡು ನಿನ್ನಹಂಕೃತಿಯ ॥೧॥

ದ್ರೋಣ : ಅರ್ಜುನಾ, ಅನವಶ್ಯಕವಾಗಿ ಆವೇಶ ಭರಿತನಾಗಬೇಡ. ಈ ಏಕಲವ್ಯ ಸಹಜವಾಗಿ ಜಾಣನಿದ್ದಾನೆ. ವಿದ್ಯಾರ್ಥಿಗಳಿಗೆ ಸ್ಪರ್ಧಾಳುಗಳಿದ್ದಷ್ಟೂ ಕಲಿಕೆಯು ಹೆಚ್ಚು ಪ್ರಖರವಾಗುತ್ತದೆ. ಆದರೂ ನೀನು ಇವನನ್ನು ಸ್ಪರ್ಧಾಳುವೆಂದು ತಿಳಿಯಬೇಡ. ಮುಂದೆ ಈ ರಾಜವಂಶದ ಸಹಾಯಕ್ಕೆ ದೊರಕಬಹುದು. ಆದುದರಿಂದ ನೀವೆಲ್ಲ ಶಾಂತರಾಗಿ. ಇವನಿಗೆ ಗರಡಿಯಲ್ಲಿ ಕಲಿಯಲು ಅವಕಾಶಕೊಡಿ.

ಅರ್ಜುನ : ಗುರುಗಳೇ, ನಮಗೆಲ್ಲ ನಿಮ್ಮ ಬಗ್ಗೆ ಪೂಜ್ಯ ಭಾವವಿದೆ. ಆದರೆ ಇವನಿಗೆ ಇಲ್ಲಿ ಅವಕಾಶವಿಲ್ಲ.

ಭೀಮ : ಹೀನ ಜಾತಿಯವರು ತಮ್ಮ ಅರ್ಹತೆಯನ್ನು ಮೀರಿ ಬರಬಾರದು. ಗುರುಗಳೇ, ನೀವೇ ಅಂತಹುದಕ್ಕೆ ಅವಕಾಶ ನೀಡಬಾರದು.

ಕೌರವ : ಕಾಡಿನವರೆಂದರೆ ನಾಡಿನವರಿಗೆ ಪ್ರತಿಭಟರು. ನಮ್ಮ ಗರಡಿಯಲ್ಲೇ ಅಂತಹವರನ್ನು ಪಳಗಿಸುವುದು ಬೇಡ.

ದ್ರೋಣ : (ಒಂದಿಷ್ಟು ಯೋಚಿಸಿ) ಆಗಲಿ ಏಕಲವ್ಯನನ್ನು ನಾನು ಇಲ್ಲಿಂದ ಕಳಿಸುತ್ತೇನೆ. ಇಂದೇಕೋ ಮನಸ್ಸು ವ್ಯಗ್ರವಾಗಿದೆ. ನೀವೀಗ ಅರಮನೆಗೆ ತೆರಳಿ ಆಟವಾಡಿ (ಎಲ್ಲರೂ ತೆರಳುವರು) (ಆಟಕ್ಕೆ ಓಡುವವರಂತೆ ವೇಗದಲ್ಲಿ ತೈತತಕತ)

ದ್ರೋಣ : ಅರಗುವರರ ಈ ಪ್ರವೃತ್ತಿ ನನ್ನ ಊಹನೆಗೆ ಮೀರಿದ್ದು. ಜಾತಿಯ ನೆಲೆಯಲ್ಲಿ ಅರ್ಹತೆ ಇರುತ್ತದೆಂಬ ಇವರ ಅರಿವಿನ ಮೂಲವಿರುವುದು ಪ್ರತಿಷ್ಠೆ ಮತ್ತು ಸ್ಥಾನಮಾನದ ಪ್ರಜ್ಞೆಯಲ್ಲಿ. ಇಷ್ಟು ಸಣ್ಣ ಮಕ್ಕಳಲ್ಲಿ ಅದಿಷ್ಟು ಗಟ್ಟಿಯಾಗಿ ಬೇರೂರಲು ಮನೆಯ ವಾತಾವರಣವೇ ಕಾರಣ.

ಶಸ್ತ್ರಾಭ್ಯಾಸ ಮಾಡಿಸುತ್ತಿದ್ದ ನನಗೆ ಈ ಕುರಿತಾಗಿ ಮಕ್ಕಳನ್ನು ತಿದ್ದುವ ಅಗತ್ಯವಿದೆಯೆಂದು ಈಗ ತಿಳಿಯಿತು. ಆದರೆ ಅದು ಒಂದೆರಡು ದಿನಗಳಲ್ಲಿ ಆಗುವ ಕೆಲಸವಲ್ಲ, ನೋಡೋಣ. (ತಲೆತಗ್ಗಿಸಿ ನಿಂತ ಏಕಲವ್ಯನನ್ನು ದ್ರೋಣ ಹತ್ತಿರ ಕರೆದು ಸಮಾಧಾನ ಹೇಳುತ್ತಾನೆ.)

ದ್ರೋಣ : ಮಗೂ, ಏಕಲವ್ಯ...

ಏಕಲವ್ಯ : ಗುರುಗಳೇ,...

ದ್ರೋಣ : ಏಕಲವ್ಯಾ, ನೋವುಂಡಿರುವ ನಿನ್ನನ್ನು ಹೇಗೆ ಸಂತೈಸುವುದೆಂದು ಯೋಚಿಸುತ್ತಿದ್ದೇನೆ. ಹೇಳು, ನಿನ್ನ ಅಭೀಪ್ಸೆ ಏನು?

ಏಕಲವ್ಯ : ಗುರುಗಳೇ, ನನಗೆ ವಿದ್ಯೆ ಬೇಕು. ನಾನು ಕಲೀತೇನೆ. ನೀವೇ ಕಲಿಸಬೇಕು. (ಕಾಲಿಗೆರಗುವನು)

ದ್ರೋಣ: ಆಹಾ! ಎಂತಹ ಮುಗ್ಧತೆ ! ಎಷ್ಟು ನೇರವಾದ ಮಾತುಗಳು! ಮಗೂ, ಚಿಂತಿಸಬೇಡ.

ರಾಗ ಮಧ್ಯಮಾವತಿ / ತ್ರಿವುಡೆ ತಾಳ

ಚಿಂತೆಗೊಳದಿರು ಬಾಲ ನಾನೇ! ಕಾಂತದೊಳು ಕಲಿಸುವೆನು ವಿದ್ಯೆಯ ।
ಸಂತಸದಿ ಮಗನೊಡನೆ ತೆರಳೈ। ಸಂತವಿಸುತಲಿ ಪೇಳ್ದನು । ದ್ರೋಣನಂದು॥

ದ್ರೋಣ: ಏಕಲವ್ಯಾ, ಈ ಗರಡಿಯಲ್ಲಿ ನನಗೆ ಸ್ವಾತಂತ್ರ್ಯವಿಲ್ಲ. ಆದರೆ ನನ್ನ ಮನೆಯಲ್ಲಿ ಸ್ವಾತಂತ್ರ್ಯವಿದೆ. ನನ್ನ ವಿದ್ಯೆಯ ಮೇಲೂ ಸ್ವಾತಂತ್ರ್ಯವಿದೆ. ಹಾಗಾಗಿ ಒಂದು ಪರಿಹಾರ ಹೇಳುತ್ತೇನೆ. ನಿನಗೊಪ್ಪಿಗೆಯಿದ್ದರೆ ಹಾಗೆ ಮಾಡಬಹುದು.

ಏಕಲವ್ಯ : ಹೇಳಿ ಗುರುಗಳೇ,

ದ್ರೋಣ: ನೀನು ನಮ್ಮ ಮನೆಗೆಲಸದವನಂತೆ ನಮ್ಮಲ್ಲೇ ಇರು. ನಾನು ಇಲ್ಲಿ ಗರಡಿಯಲ್ಲಿ ಈ ಅರಸುವರರಿಗೆ ಕಲಿಸುವಾಗ ನೋಡಿ ಕಲಿ. ನಂತರ ಈ ಅಶ್ವತ್ಥಾಮನೊಡನೆ ಮನೆಯಲ್ಲಿ ಅಭ್ಯಾಸ ಮಾಡು. ಇನ್ನುಳಿದುದನ್ನು ನಾನು ಮನೆಯಲ್ಲೇ ಹೇಳಿಕೊಡುತ್ತೇನೆ. ಹೀಗೆ ನೀನು ಬಿಲ್ವಿದ್ಯೆಯನ್ನು ಕಲಿಯುವಿಯಂತೆ.

ಏಕಲವ್ಯ : ಗುರುದೇವ ! ಎಂತಹ ಹೃದಯ ವೈಶಾಲ್ಯ ನಿಮ್ಮದು. ನೀವು ಮಹಾಗುರುಗಳು. ನನ್ನಪ್ಪ ಹೇಳಿದಂತೆ ಅಲ್ಲ ನೀವು. ನನ್ನ ನೋವನ್ನೆಲ್ಲ ಪರಿಹರಿಸಿದಿರಿ. ನಿಮ್ಮ ಮನೆಯಾಳಾಗಿ ನಿಮ್ಮ ಸೇವೆ ಮಾಡಿ ನಿಷ್ಠೆಯಿಂದ ಕಲಿಯುತ್ತೇನೆ. ನಿಮ್ಮ ಪುತ್ರನ ಗೆಳತನ ನನಗಿನ್ನೊಂದು ಭಾಗ್ಯ. ದೇವಾ ನನ್ನನ್ನು ಉದ್ಧರಿಸಿ.

ದ್ರೋಣ : ಆಗಲಿ, ಬಾ ಮನೆಗೆ ತೆರಳೋಣ. ಅಶ್ವತ್ಥಾಮಾ, ಈತನನ್ನು ಆಶ್ರಮಕ್ಕೆ ಕರೆದು ತಾ. (ದ್ರೋಣರ ನಿರ್ಗಮನ.)

ಅಶ್ವತ್ಥಾಮ : ಏಕಲವ್ಯಾ, ಬಾ, ಮನೆಗೆ ಹೋಗೋಣ.

(ತ್ರೈತತಕತದಲ್ಲಿ ಇಬ್ಬರೂ ನಿರ್ಗಮನ)

ಅರ್ಧ ಭಾಮಿನಿ

ಕಾಡಿನಿಂದಲಿ ಬಂದ ಬೇಡನು ।
ನಾಡಿನಲಿ ನಾಡೋಜ ದ್ರೋಣನ
ಜಾಡ ಹಿಡಿಯುತ ಹೇಳ್ದ ಬಚ್ಚನ ಪಿತನ ಮರಣವನು ।

ಅದೆಷ್ಟು ದಿನ ಆತು. ನಮ್ಮ ಬಚ್ಚ ಇದ್ಯಾ ಕಲೀಕೆ ಗಜಾಪುರಕ್ಕೆ ಓಗಿ ಅದೆಷ್ಟು ದಿನ ಆತು. ವರ್ಸಾನೇ ಆತೋ ಏನೋ? ಮನೇಗೂ ಬರಾಕಿಲ್ಲ ಅಂದ್ರೆ ಎಂಗೆ? ಅದೆಂತಾ ಇಧ್ಯಾ ಅದು? ಆ ಪರ್‌ಮಾತ್ಮಂಗೇ ಗೊತ್ತು. ಈ ಕಡೆ ಲವ್ನ ಅಪ್ಪ ಶಬರ ಸಂಕ್ಯಾ ಬಿದ್ದು ಸತ್ತೋಗ್ಯಾನ. ಅದೇ ಸುದ್ದಿ ಬಚ್ಚಂಗೆ ಮುಟ್ಟಿಸೋಣಾಂತ ಹೊರಟಿವ್ನಿ. ಇದೇನ್ ಗಜ್‌ಪುರ ! ಎಂಥಾ ನಗರ ! ದೊಡ್ಡ ದೊಡ್ಡ ಉದ್ಯಾನಗಳು! ಅಗಲವಾದ ರಾಜಬೀದಿಗಳು ಎತ್ತರವಾದ ಕಟ್ಟಡಗಳು. ಇಲ್ಲಿ ಎಲ್ಲಪ್ಪಾ ದೋಣಿ ಆಚಾರ್ರ ಮನೆ ಅಂತಾ ಕೇಳ್ತಾ ಬಂದೆ. ಈಗ ಗೊತ್ತಾತು. ಇದೇ ಅವ್ರ ಮನೆ. ಇದು ಬ್ರಾಂಬ್ರ ಮನೆ ಹೌದು. ಒಳಗೊಬ್ರಿದ್ದಾರಲ್ಲಾ ಅವ್ರಲ್ಲೇ ವಿಚಾರಿಸ್ತೇನೆ. ಓಯ್, ಓ ಹೋಯ್.

ದ್ರೋಣ : ಯಾರದು ? ಎಲ್ಲಿಂದ ಬಂದೆ ?

ಬೇಡ : ಈ ಮನೆ ದೋಣಿ ಆಚಾರ್ರಿದ್ದು ಹೌದಲ್ರಿ?

ದ್ರೋಣ : ನೀನು ದ್ರೋಣಾಚಾರ್ಯರ ಬಗ್ಗೆ ಕೇಳುತ್ತಿದ್ದೀಯೋ?

ಬೇಡ : ಹೌದ್ರಿ ಅಪ್ಪಾ, ನೀವೇ ಏನ್ರೀ ದೋಣಿ ಆಚಾರ್ರು ?

ದ್ರೋಣ : ಹೌದು ನಾನೆ.

ಬೇಡ : ನೀವು ಬ್ರಾಹ್ಮಣ್ರು ಹೌದಲ್ಲೋ?

ದ್ರೋಣ : ಹೌದು.

ಬೇಡ : ಶುದ್ಧ ಬ್ರಾಹ್ಮಣ್ರೋ ಅಥವಾ.........!

ದ್ರೋಣ : ಶುದ್ಧ ಬ್ರಾಹ್ಮಣರು, ಅಶುದ್ಧ ಬ್ರಾಹ್ಮಣರು ಅಂದರೇನೋ?

ಬೇಡ : ಹಾಗಲ್ಲ ಬುದ್ಧಿ, ಜಾತಿ ಬ್ರಾಹ್ಮಣ್ರೋ ಅಂತ ಕೇಳ್ದೆ.

ದ್ರೋಣ : ಜಾತಿ ಬ್ರಾಹ್ಮಣರು ಬೇರೆ, ಬ್ರಾಹ್ಮಣ್ಯ ಬೇರೆ. ನಾನು ಬ್ರಾಹ್ಮಣ್ಯವನ್ನು ಗೌರವಿಸುವವ.

ಬೇಡ : ಮತ್ತೆ ನೀವು ಬಿಲ್ಲು, ಬಾಣ, ಕತ್ತಿ, ಖಡ್ಗ ಇದ್ನಾ ಕಲಿಸ್ತೀರಂತೆ

ದ್ರೋಣ : ಹೌದು, ಅದರಿಂದೇನಾಯಿತು?

ಬೇಡ : ಬ್ರಾಹ್ಮಣ್ರಿಗೆ ಅದು ಸರಿಯಾಗ್ತದೋ ಬುದ್ಧಿ?

ದ್ರೋಣ : ವಿದ್ಯೆಯೆಂಬುದು ಯಾವ ಜಾತಿಗೂ ವರ್ಗಕ್ಕೂ ಕಟ್ಟಿಬಿದ್ದಿಲ್ಲ. ಆಸಕ್ತಿ ಮತ್ತು ಅಭಿರುಚಿ ಇದ್ದರೆ ಯಾರೂ ಯಾವ ವಿದ್ಯೆಯನ್ನೂ ಕಲಿಯಬಹುದು.

ಬೇಡ : ಅಂದ್ರೆ ನಮ್ಮುಡ್ಗ ಬಚ್ಚ ಬಂದಿದ್ನಲ್ಲಾ, ಅವ್ನಿಗೂ ಕಲಿಸ್ತೀರಾ ಬುದ್ಧಿ?

ದ್ರೋಣ : ಬಚ್ಚ! ಅಂದರೆ ಏಕಲವ್ಯನೇ?

ಬೇಡ : ಏಕಲವ್ಯ ಅಲ್ಲ ಬುದ್ಧಿ. ಬಚ್ಚ, ಬರೇ ಬಚ್ಚ.

ದ್ರೋಣ : ಆತನೇ ಸರಿ. ಇಲ್ಲಿ ನಾವು ಅವನಿಗೆ ಏಕಲವ್ಯನೆಂದು ಹೆಸರಿಟ್ಟಿದ್ದೇವೆ.

ಬೇಡ : ಹೌದಾ ಬುದ್ಧಿ, ನಾನು ಅವ್ನ ಚಿಕ್ಕಪ್ಪ ಬುದ್ಧಿ (ಅಳುವನು)

ದ್ರೋಣ : ಚಿಕ್ಕಪ್ಪನಾದರೆ ಅಳುವುದೇಕೋ?

ಬೇಡ : ಅಳುವುದು ಅವ್ನ ಅಪ್ಪ ಸತ್ತು ಹೋದ್ದಕ್ಕೆ ಬುದ್ಧಿ. ಅವನನ್ನು ಕರ್ಕೊಂಡು ಹೋಗಕ್ಕೆ ಬಂದೆ ಬುದ್ಧಿ.

ದ್ರೋಣ : ಹೌದೇ? ಸತ್ತು ಹೋದವನ ಸುದ್ದಿ ಹೊತ್ತು ತಂದ ನೀನು ಇಷ್ಟು ಹೊತ್ತು ಮಾತಾಡಿದಿಯಲ್ಲ!

ಬೇಡ : ಮತ್ತೇನು ಮಾಡುವುದು ಬುದ್ಧಿ. ನಿಮ್ಮಂತಹವರೊಡನೆ ಸಿಕ್ಕಿದಾಗ ಮಾತಾಡಿದಷ್ಟು ಬಂತು. ಬಚ್ಚ ಎಲ್ಲಿ ಬುದ್ಧಿ?

ದ್ರೋಣ : ಅದೋ ಅಲ್ಲಿ ಬಯಲಲ್ಲಿ ಶಸ್ತ್ರಾಭ್ಯಾಸ ಮಾಡುತ್ತಿದ್ದಾನೆ. ಸಾವಧಾನದಿಂದ ವಿಚಾರ ಹೇಳಿ ಕರಕೊಂಡು ಹೋಗು.

ಬೇಡ : ಆಗಲಿ ಬುದ್ಧಿ. ಬರುತ್ತೇನೆ. (ನಿರ್ಗಮನ)

ದ್ರೋಣ : ಒಬ್ಬೊಬ್ಬರ ಬದುಕಿನಲ್ಲಿ ಆಪತ್ತುಗಳು ಹೇಗೆ ಬರುತ್ತವೆಂದು ಹೇಳಲು ಸಾಧ್ಯವಿಲ್ಲ. ಪಾಪ ಏಕಲವ್ಯ. ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದ. ನಾನೂ ಹೋಗಿ ಸಮಾಧಾನ ಹೇಳಿ ಆತನನ್ನು ಕಳಿಸುತ್ತೇನೆ. (ನಿರ್ಗಮನ)

(ತೈತತಕತದಲ್ಲಿ ಪಾಂಡವರ ಪ್ರವೇಶ. ಧರ್ಮರಾಯ ಪೀಠದಲ್ಲಿ ಕುಳಿತುಕೊಳ್ಳಬೇಕು.)

(ಅರ್ಜುನನಿಗೆ ಪದ್ಯ)

ರಾಗ ಭೈರವಿ । ಅಷ್ಟತಾಳ

ಅಣ್ಣನೆ ಕೇಳಾ ಕೌರವ ಪಾಳಯ । ಮಣ್ಣಗೂಡಿದೆಯಂತೆ ॥

ಅರ್ಜುನ : ಅಣ್ಣಾ, ಗುರು ಹಿರಿಯರ ಸಮ್ಮುಖದಲ್ಲಿ ನಡೆದ ಪರೀಕ್ಷೆಯಲ್ಲಿ ನಮ್ಮ ಕರಕೌಶಲ್ಯವನ್ನು ಸಮರ್ಥವಾಗಿಯೇ ತೋರಿದ್ದೇವೆ. 'ಭಲಾ ಅರ್ಜುನ' ಎಂಬುದಾಗಿ ನನ್ನನ್ನು ಹಿರಿಯರೆಲ್ಲ ಹೊಗಳುತ್ತಿದ್ದ ಹೊತ್ತಿನಲ್ಲಿ ಒಮ್ಮಿಂದೊಮ್ಮೆಲೇ ಬಂದ ಕರ್ಣ ನನಗೆ ಸವಾಲೆಸೆದ. ಅರ್ಹತೆ ಇಲ್ಲದೆ ಬಂದವನನ್ನು ನಾವು ಲೆಕ್ಕಕ್ಕೇ ತಕ್ಕೊಳ್ಳಲಿಲ್ಲ. ಆದರೆ ಆ ಕೌರವ ಅಂಗರಾಜ್ಯಾಭಿಷೇಕ ಅಂತೇನೋ ಮಾಡಿ ಆ ಕರ್ಣನಿಗೆ ಸ್ಥಾನ ಕೊಟ್ಟ.

ಧರ್ಮರಾಯ : ನಮ್ಮ ಹಿರಿಯರೇ ಆಕ್ಷೇಪಿಸದಿದ್ದಾಗ ನಾವು ಮಾತಾಡುವುದು ಸರಿಯಲ್ಲವೆಂದೇ ನಾನು ಸುಮ್ಮನಿದ್ದೆ.

ಭೀಮ : ಅಣ್ಣಾ ನನಗೆ ಸಿಟ್ಟು ನೆತ್ತಿಗೇರಿತ್ತು. ಆದರೆ ನೀನು ಮಾತಾಡದಿದ್ದುದಕ್ಕೆ ನಾನು ಸುಮ್ಮನಿದ್ದೆ.

ಧರ್ಮರಾಯ : ಅದು ಒಳ್ಳೆಯದೇ ಆಯಿತು.

ಅರ್ಜುನ : ಅಣ್ಣಾ, ಆ ಬಳಿಕ ಗುರುದಕ್ಷಿಣೆಯ ವಿಚಾರ ಬಂತು. ಪಾಂಚಾಲ ದೇಶಾಧಿಪನಾದ ದ್ರುಪದನನ್ನು ಹೆಡೆಮುರಿ ಕಟ್ಟಿ ತನ್ನ ಕಾಲ ಬಳಿ ತಂದು ಹಾಕಿದರೆ ಅದೇ ತನಗೆ ಗುರುದಕ್ಷಿಣೆ ಎಂದರು ಗುರುಗಳು.

ಧರ್ಮರಾಯ : ತಾವು ಅದನ್ನು ಬೇಗ ಪೂರೈಸುತ್ತೇವೆಂದು ಸುಯೋಧನಾದಿಗಳು ಆಗಲೇ ಧಾವಿಸಿದ್ದಾರಲ್ಲಾ?.

ಅರ್ಜುನ : ಹೌದಣ್ಣಾ, ಆದರೆ ಆ ಅಧಿಕ ಪ್ರಸಂಗಿ ಕರ್ಣನನ್ನು ಸೇರಿಸಿಕೊಂಡೇ ಹೋದ ಕೌರವರು ಆ ದ್ರುಪದನ ವಿಟು ತಿಂದು ಹಿಂದಿರುಗಿದ್ದಾರೆ. ಆದ್ದರಿಂದ ನನಗೆ ಅಪ್ಪಣೆ ಕೊಡು. ಆ ದ್ರುಪದನನ್ನು ಈಗಲೇ ಸೋಲಿಸಿ ಹೆಡೆಮುರಿ ಕಟ್ಟಿ ತರುತ್ತೇನೆ.

ಭೀಮ : ಅಣ್ಣಾ ನನಗಪ್ಪಣೆಯಿತ್ತರೆ!...

ರಾಗ ಶಂಕರಾಭರಣ ಮಟ್ಟೆತಾಳ

ಮರುತ ಸುತನು ಪೇಳ್ದನಾಗ । ದುರುಳ ದ್ರುಪದನನ್ನು ಬೇಗ ॥
ಧುರದಿ ಕೆಡಹಿ ಕಟ್ಟಿ ಕೊಡುವೆ । ಗುರುಗೆ ದಕ್ಷಿಣೆ ॥

ಭೀಮ : ಅಣ್ಣಾ, ಕೌರವಾದಿಗಳು ಸೋತದ್ದು ಒಳ್ಳೆಯದೇ ಆಯಿತು. ನಮಗಿದೊಂದು ಅವಕಾಶ. ನಾವಿದನ್ನು ಬಿಡಬಾರದು. ನಾನೇ ಆ ದ್ರುಪದನನ್ನು ಕೆಡಹಿ ಕೈ ಕಾಲಿಗೆ ಹಗ್ಗಬಿಗಿದು ಎತ್ತಿ ತಂದು ಗುರುಗಳ ಕಾಲ ಬುಡದಲ್ಲಿ ಎಸೆದು ಗುರುದಕ್ಷಿಣೆ ಸಲ್ಲಿಸುತ್ತೇನೆ.

ಧರ್ಮರಾಯ : ಇರಲಿ, ನಾವೀಗ ಯಾವುದಕ್ಕೂ ಪಾಂಚಾಲ ನಗರಿಗೆ ಧಾವಿಸೋಣ.

ತಣ್ಣನೆ ಕುಳಿತಿಹ ದ್ರುಪದನ ನೀಗಲೆ I ಬಣ್ಣಗೆಡಿಸಿ ಬಿಡುವೆ II೧II

(ಬಾಗಿಲಲ್ಲಿ ದೂತ - ಹಾಸ್ಯವನ್ನು ಸರಳವಾಗಿ ಮಾಡುವುದು)

(ದ್ರುಪದನಿಗೆ ಧೀಂಗಿಣ ಪ್ರವೇಶ)

ರಾಗ ಕಾಂಬೋಧಿ I ಝಂಪೆತಾಳ

ಪರಮಹಾ ಪಾಂಚಾಲ ನಗರಿಯನ್ನಾಳುತಿಹ I
ಪರಮ ವಿಕ್ರಮಿ ದ್ರುಪದ ರಾಜ II
ಮೆರೆದು ಸಭೆಯೊಳು ಪೇಳ್ದ ಕೌರವರ ಸಾಹಸದಿ I
ಮರಳಿ ಕಳಿಸಿಹೆ ಬುದ್ಧಿ ಬರಲಿII ೧II

ದ್ರುಪದ : ಈ ಪಾಂಚಾಲ ದೇಶದ ರಾಜ್ಯಾಧಿಕಾರವನ್ನು ತಂದೆಯಿಂದ ಪಡೆದ ಬಳಿಕ ರಾಜ ಧರ್ಮದಂತೆ ಪ್ರಜಾಪರಿಪಾಲನೆಯನ್ನು ಮಾಡುತ್ತಿದ್ದೇನೆ. ಈ ಅಧಿಕಾರವನ್ನು ನಿರ್ವಹಿಸುವಾಗ ಕೆಲವೊಂದು ಅನುಭವಗಳು ಉಂಟಾಗಿವೆ. ಬಾಲ್ಯದ ವಿದ್ಯಾಭ್ಯಾಸದ ಕಾಲದಲ್ಲಿ ತಿಳಿಯದಿದ್ದ ಕೆಲವೊಂದು ವಿಚಾರಗಳ ಅರಿವಾಗಿದೆ. ಸ್ಥಾನಮಾನ, ಪ್ರತಿಷ್ಠೆ, ಗೌರವಗಳ ಮಹತ್ವವೇನೆಂಬುದು ತಿಳಿದಿದೆ. ಹಾಗಾಗಿಯೇ ಕೆಲವು ಸಮಯದ ಹಿಂದೆ ದ್ರೋಣನ ಮಾನಭಂಗ ಪ್ರಕರಣ ನಡೆಯಿತು. ಆದರೆ ಆತ ನನ್ನನ್ನು ಅವಮಾನ ಪಡಿಸುವ ಉದ್ದೇಶದಿಂದಲೇ ಶಿಷ್ಯಂದಿರನ್ನು ತಯಾರಿಸುತ್ತಾನೆಂದು ನಾನೆಣಿಸಿರಲಿಲ್ಲ. ಆ ಕೌರವಾದಿ ನೂರು ಮಂದಿ ಹುಡುಗರು ಇಲ್ಲಿಗೆ ಬಂದು ದಾಂಧಲೆ ಎಬ್ಬಿಸಿದಾಗಲೇ ನನಗದು ತಿಳಿದದ್ದು. ಎಲ್ಲರನ್ನೂ ಒಂದೇ ಯುದ್ಧದಲ್ಲಿ ಸೋಲಿಸಿದೆ. ಹುಡುಗರು ಸ್ವಂತ ಬುದ್ಧಿಯಿಂದ ಬಂದವರಲ್ಲ ಎನ್ನುವುದರಿಂದಾಗಿ ಬದುಕಲು ಬಿಟ್ಟಿದ್ದೇನೆ. ಇರಲಿ, ನನ್ನ ಸಾಮರ್ಥ್ಯವೆಷ್ಟೆಂಬುದು ಪ್ರಪಂಚ ಮುಖಕ್ಕೆ ಪರಿಚಯವಾದದ್ದು ನನಗೆ ಲಾಭವೇ ಆಯಿತು. ಈಗ ಒಂದಿಷ್ಟು ವಿಶ್ರಾಂತಿ (ಅಷ್ಟರಲ್ಲಿ ದೂತ ಬರಬೇಕು - ಅಡ್ಡ ಬಿದ್ದೆ ಬುದ್ಧಿ) ಹೂಂ ಯಾರು? ಬಾಗಿಲ ಭಟ! ನೀನೇಕೆ ಇಲ್ಲಿಗೆ ಬಂದೆ ?

ದೂತ : ಕೇಳಬೇಕು ಬುದ್ಧಿ.

ರಾಗ ಮುಖಾರಿ I ಏಕತಾಳ

ದೊರೆರಾಯ ನೀ ಲಾಲಿಸಯ್ಯ I ಬಾಗಿಲ ಬಳಿಗೆ I
ತರುಣರೈವರು ಬಂದರಯ್ಯ II ಅರುಹಿದ ರೆನ್ನೊಳು
ಬವರಕೆ ಬಂದೆವು I ಕರಿಪುರದೊಳು ಗುರು ದ್ರೋಣರ ಶಿಷ್ಯರು II೧II

ದೂತ : ದೇವ್ರೆ ದೇವ್ರೆ, ಹೆಬ್ಬಾಗಿಲಿನಲ್ಲಿ ಭಾರೀ ಗಲಾಟೆ ಬುದ್ಧಿ.

ದ್ರುಪದ : ಏನು ಗಲಾಟೆ ? ಯಾರಿಂದ ಗಲಾಟೆ?.

ದೂತ : ಐದು ಜನ ಹುಡುಗ್ರು ಬಂದಿದ್ದಾರೆ ಬುದ್ಧಿ.

ದ್ರುಪದ : ಯಾರವರು? ಎಲ್ಲಿಂದ ಬಂದಿದ್ದಾರೆ ? ಕೇಳಿದಿಯೇನೋ ?

ದೂತ : ನಾನೇನೂ ಕೇಳ್ಲಿಲ್ಲ ಬುದ್ಧಿ. ಆದ್ರೆ ಅವ್ರೇ ಹೇಳಿದ್ರು.

ದ್ರುಪದ : ಏನು ಹೇಳಿದರು?

ದೂತ : ಅವ್ರು ಕರಿಪುರದಿಂದ ಬಂದವ್ರಂತೆ ಬುದ್ಧಿ.

ದ್ರುಪದ : ಅಂದ್ರೆ ಹಸ್ತಿನಾವತಿಯುವರು ? ವೊನ್ನೆ ಪೆಟ್ಟು ತಿಂದು ಹೋದವರಲ್ವೇನೋ?

ದೂತ : ಅವ್ರಲ್ಲಾ ಬುದ್ಧಿ. ಇವ್ರು ಬೇರೆ.

ದ್ರುಪದ : ಮತ್ಯಾರವ್ರು? ಕೇಳ್ಳಿಲ್ವೇನೋ?

ದೂತ : ನಾನೇನೂ ಕೇಳ್ಳಿಲ್ಲಾ ಬುದ್ಧಿ, ಆದ್ರೆ ಅವ್ರೇ ಹೇಳಿದ್ರು.

ದ್ರುಪದ : ಏನು ಹೇಳಿದ್ರು? ಬೇಗ ಹೇಳು.

ದೂತ : ಇವ್ರು ಪಂಚಪಾಂಡವರಂತೆ. ದ್ರೋಣ ಶಿಷ್ಯರಂತೆ.

ದ್ರುಪದ : ಯಾಕೆ ಬಂದದ್ದಂತೆ? ಕೇಳ್ಳಿಲ್ವೇನೋ?.

ದೂತ : ನಾನೇನೂ ಕೇಳಿಲ್ಲಾ ಬುದ್ಧಿ, ಆದ್ರೆ ಅವ್ರೇ ಹೇಳಿದ್ರು.

ದ್ರುಪದ : ಏನು ಹೇಳಿದ್ರು ? ಬೇಗ ಹೇಳು.

ದೂತ : ಹೇಳಲೋ ಬುದ್ಧಿ.

ದ್ರುಪದ : ಹೇಳೊ.

ದೂತ : ಏನೋ? ಬಹಳ ಸೊಕ್ಕು ನಿನಗೆ. ಕೌರವರನ್ನು ಸೋಲಿಸಿದ ಗರ್ವದಿಂದ ಕೊಬ್ಬಿದೆಯಲ್ಲಾ? ನಮ್ಮ ಗುರುಗಳಾದ ದ್ರೋಣರಿಗೆ ಗುರುದಕ್ಷಿಣೆ ಕೊಡುವ ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ನಿನ್ನ ಕೈ ಕಾಲು ಕಟ್ಟಿ ಗುರುಗಳ ಕಾಲ ಬುಡದಲ್ಲಿ ಎಸೆಯುತ್ತೇವೆ. ಸುಮ್ಮನೆ ಬರ್ತೀಯೋ ಅಲ್ಲಾ ಯುದ್ಧಕ್ಕೆ ನಿಲ್ತೀಯೋ?

ದ್ರುಪದ : ಏನೋ? ಯಾರಲ್ಲಿ ಮಾತಾಡ್ತಿಯೆಂಬ ಎಚ್ಚರವುಂಟೇನೋ ನಿನಗೆ?

ದೂತ : ಅವ್ರು ಹೇಳಿದ್ದನ್ನು ಹೇಳಿದೆ ಬುದ್ಧಿ. ಇದೆಲ್ಲಾ ಅವ್ರ ಮಾತು. ನಾನು ಮಾತಾಡ್ಲೇ ಇಲ್ಲ ಬುದ್ಧಿ.

ದ್ರುಪದ : ಹೌದೆ ! ಅಷ್ಟು ಗರ್ವ ಬಂತೇ ಅವರಿಗೆ? ದೂತಾ, ನಾನು

ನೋಡಿಕೊಳ್ಳೇನೆ. ನೀನು ತೆರಳು (ದೂತನ ನಿರ್ಗಮನ)

ರಾಗ ಭೈರವಿ / ಏಕತಾಳ

ದೂತನೆಂದುದ ಕೇಳುತ । ಪಾಂಚಾಲ । ನಾಥನತಿ ಕೋಪಗೊಳುತ ॥
ಯಾತರದು ಈ ಗರ್ವವು । ಬಾಲರನು । ಘಾತಿಸುವೆ ನೀಗ ದಿಟವು ॥

ದ್ರುಪದ : ನನ್ನನ್ನು ಕೆಣಕುವ ಇನ್ನೊಂದು ತಂಡವೂ ಹಸ್ತಿನಾವತಿಯಲ್ಲಿದೆಯೆ? ಈ ದ್ರೋಣ ತನ್ನ ಶಿಷ್ಯರ ತಂಡಗಳನ್ನೇ ಕಳಿಸುತ್ತಿದ್ದಾನೆಯೆ? ಒಮ್ಮೆ ಪರೀಕ್ಷಿಸಿಯೇ ಬಿಡುತ್ತೇನೆ.(ನಿರ್ಗಮನ)

(ದಿತ್ತ -ದ್ರುಪದ -ಅರ್ಜುನ)

ರಾಗ ಮಾರವಿ / ಏಕತಾಳ

ಎಲವೆಲ ಪಾಂಡು ಕುಮಾರರೆ ನಿಮ್ಮನು। ಬಲಿಪಶುವಾಗಿಸುತ ।
ಕೊಲಿಸಲು ಕಳಿಸಿದ ಹಿರಿಯರು ಯಾರೈ। ಬಲಹೀನರೆ ತೆರಳಿ॥೧॥

ದ್ರುಪದ : ಎಲಾ ಪಾಂಡು ಕುಮಾರರೇ, ನೀವು ಆ ಅಹಂಕಾರಿಯಾದ ದ್ರೋಣನ ಶಿಷ್ಯರೆಂಬುದು ತಿಳಿಯಿತು. ಸರಿಯಾದ ಗುರುವು ಶಿಷ್ಯಂದಿರನ್ನು ಸನ್ಮಾರ್ಗಕ್ಕೆ ಕಳಿಸುತ್ತಾನೆ. ಆದರೆ ನಿಮ್ಮ ಗುರು ನಿಮ್ಮನ್ನು ತನ್ನ ಸ್ವಾರ್ಥದ ಸೇಡು ತೀರಿಸುವುದಕ್ಕೆ ಕಳಿಸಿದ್ದಾನೆ. ಮಕ್ಕಳೇ ನೀವಿನ್ನೂ ಸಣ್ಣವರು. ದೊಡ್ಡವರು ಹೇಳಿದ್ದನ್ನು ಕೇಳಬೇಕು ನಿಜ. ಆದರೆ ಏನು ಹೇಳಿದ್ದಾರೆಂಬುದರ ಫಲಾಫಲಗಳ ವಿವೇಚನೆ ನೀವು ಮಾಡಬೇಕಿತ್ತು. ನೀವೀಗ ಕೇವಲ ಬಲಿಪಶುಗಳು. ಆ ಕೌರವರಿಗಾದ ಗತಿಯೇ ನಿಮಗಾದೀತು ಎಚ್ಚರ !

ಅರ್ಜುನ : ಎಲಾ ದ್ರುಪದ,

ರಾಗ ಭೈರವಿ / ಏಕತಾಳ

ಎಲವೋ ಭೂಮಿಪ ನೀನು । ಕಾ । ದಲು ಬಾ ಪೌರುಷವೇನು॥
ಮಲಗಿಸಿ ನಿನ್ನನ್ನು ರಣದಿ । ನಾ। ನೆಲೆದೊಯ್ವೆನು ಗುರುಪದದಿ ॥೧॥

ಅರ್ಜುನ: ಎಲವೋ ದ್ರುಪದ, ಪ್ರಾಯದಲ್ಲಿ ನೀನು ಹಿರಿಯ. ಅದಕ್ಕಾಗಿ ನಿನಗೆ ಗೌರವ ಕೊಡೋಣವೆಂದರೆ ನೀನು ಅದಕ್ಕೂ ಅನರ್ಹ. ನಮ್ಮ ಗುರುಗಳನ್ನು ಹೀಯಾಳಿಸಿ ಮಾತಾಡುತ್ತಿದ್ದೀಯಾ? ಅದರಿಂದ ಧೃತಿಗೆಡುವವರು ನಾವಲ್ಲ. ನಮ್ಮ ಗುರುಗಳ ಹಿರಿಮೆ ಗರಿಮೆಗಳನ್ನು ನಾವು ತಿಳಿದಿದ್ದೇವೆ. ನಿನ್ನನ್ನು ಯುದ್ಧದಲ್ಲಿ ಸೋಲಿಸುತ್ತೇವೆ. ಪೌರುಷಕ್ಕೆ ಪ್ರಾಯದ ಲೆಕ್ಕವಿಲ್ಲವಲ್ಲ?

ದ್ರುಪದ : ಮಾತುಗಳನ್ನು ಚೆನ್ನಾಗಿ ಆಡಿದ್ದಿ. ಆದರೆ ಕೌರವರ ಪಾಳೆಯವನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಹಿಂದಕ್ಕಟ್ಟಿದ್ದನ್ನು ಮರೆಯಬೇಡ.

ಅರ್ಜುನ : ನಾವು ಕೌರವರಂತೆ ಅಲ್ಲ. ಇಗೋ ಈ ಬಾಣದ ರುಚಿಯನ್ನು ನೋಡುವಿಯಂತೆ.

ದ್ರುಪದ : ಹೌದೇ, ಅಷ್ಟೊಂದು ಗರ್ವವೇ? ಹಾಗಿದ್ದರೆ ನೋಡೋಣ ನಿಲ್ಲು ಯುದ್ಧಕ್ಕೆ.

(ಯುದ್ಧ. ದ್ರುಪದನ ಸೋಲು, ಕಟ್ಟಿಹಾಕುವುದು, ನಂತರ ಪಾಂಡವರು ದ್ರುಪದನನ್ನು ಎಳೆದೊಯ್ಯುವುದು.)

(ಮುಂದಿನ ಪದ್ಯ ಆರಂಭಿಸುತ್ತಲೇ ದ್ರೋಣ ಮತ್ತು ಅರ್ಜುನ ರಂಗಸ್ಥಳಕ್ಕೆ ಬರುವುದು)

ಎರಕಲ ಕಾಂಭೋಜಿ । ಅಷ್ಟತಾಳ

ಭಳಿರೆ ಮೆಚ್ಚಿದೆ ಪಾರ್ಥ ನಿನ್ನ ತೋಳ್ಬಲಕೆ।
ಇಳೆಯೊಳಗೆಣೆಯಿಲ್ಲ ನಿನ್ನ ಕೌಶಲಕೆ॥
ತರಳ ನಿನ್ನಯ ಸಾಹಸದ ಫಲವೆಲ್ಲರು।
ಗುರುದಕ್ಷಿಣೆಯ ನೀಡಿದಂತಾಯ್ತು ಮನದೊಳು॥
ಹರುಷಗೊಂಡಿಹೆನು ನಾನು॥ ನಿನ್ನನ್ನು ಧನು।
ಶರವಿದ್ಯೆಯೊಳು ವೀರನು॥
ಪ್ರಪಂಚದಿ ।ಸರಿಸಾಟಿಯಿಲ್ಲವಿನ್ನು ॥
ಎಂಬಂತೆಯೆ । ಕರುಣಿಸಿ ಪರಿಪೂರ್ಣ ಬಿಲ್ಲಾಳುಗೈವೆನು॥

ದ್ರೋಣ : ಮಗೂ ಅರ್ಜುನ, ನೀನು ಆ ದ್ರುಪದನ ಸೊಕ್ಕನ್ನು ಮುರಿದೆ. ತನ್ಮೂಲಕ ಲೋಕೋತ್ತರ ವೀರನೆಂಬ ಖ್ಯಾತಿಯನ್ನು ಗಳಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ದ್ರೋಣನು ಒಬ್ಬ ಸಮರ್ಥ ಗುರುವೆಂಬುದಕ್ಕೆ ಸಾಕ್ಷಿಯಾಗಿ ನಿಂತೆ. ನಿನ್ನೊಬ್ಬನಿಂದಾಗಿ ಎಲ್ಲಾ ಶಿಷ್ಯಂದಿರೂ ಗುರುದಕ್ಷಿಣೆಯನ್ನು ಸಲ್ಲಿಸಿದ ಫಲ ಸಿಕ್ಕಿತು. ಪಾರ್ಥಾ ನನ್ನನ್ನು ಅವಮಾನಿಸಿದ ದ್ರುಪದನಿಗೆ ಪಾಠ ಕಲಿಸಿದ ನೀನಿನ್ನು ನನಗೆ ಆತ್ಮೀಯ ಶಿಷ್ಯ. ನಿನ್ನನ್ನು ಲೋಕೋತ್ತರ ವೀರನನ್ನಾಗಿ ಮಾಡುತ್ತೇನೆ. ದಿಗ್‌ದಿಗಂತದಲ್ಲಿ ನಿನ್ನ ಕೀರ್ತಿ ವ್ಯಾಪಿಸುವಂತಹ ಸಾಮರ್ಥ್ಯವನ್ನು ನಿನ್ನಲ್ಲಿ ಬಿತ್ತುತ್ತೇನೆ. ನನಗೆ ಗೊತ್ತಿರುವ ಬಿಲ್ವಿದ್ಯೆಯ ಜಾಣ್ಮೆಯನ್ನೆಲ್ಲಾ ಧಾರೆಯೆರೆಯುತ್ತೇನೆ. ಈ ದ್ರೋಣನಿಗೆ ನಿನ್ನನ್ನು ಮೀರಿದ ಇನ್ನೊಬ್ಬ ಶಿಷ್ಯನಿಲ್ಲ. ಇದು ಸತ್ಯ.

ಅರ್ಜುನ : ಗುರುಗಳೇ, ನಿಮ್ಮ ಶಿಷ್ಯತ್ವವನ್ನು ಪಡೆದ ನಾನೇ ಧನ್ಯ. ನನ್ನ ಸಾಧನೆ ಕೌಶಲ್ಯಗಳೇನಿದ್ದರೂ ಅವು ನಿಮ್ಮಿಂದಾಗಿ. ಒರಟು ಕಲ್ಲನ್ನು ಕಡೆದು ಮೂರ್ತಿಯನ್ನು ರೂಪಿಸುವ ಶಿಲ್ಪಿಯಂತೆ ಗುರುಗಳಾಗಿ ನೀವು ನನ್ನನ್ನು

ಧೀರ ಬಿಲ್ಗಾರನನ್ನಾಗಿ ರೂಪಿಸಿದ್ದೀರಿ. ಇನ್ನು ನಿಮ್ಮ ಪೂರ್ಣ ಜ್ಞಾನವನ್ನು ಕರುಣಿಸುವುದಾಗಿ ಹೇಳಿದಿರಿ. ಅದನ್ನು ಪಡೆದೆನಾದರೆ ನನಗೆ ಸರಿಸಾಟಿಯಾದ ಚಾಪ ವಿದ್ಯಾ ಪರಿಣತರು ಯಾರೂ ಇರಲಾರರು. ಗುರುಗಳೇ ನಿಮ್ಮ ಪೂರ್ಣಾನುಗ್ರಹವಿರಲಿ.

ದ್ರೋಣ : ತಥಾಸ್ತು (ನಿರ್ಗಮನ)

ಅರ್ಜುನ : ದ್ರುಪದ ಗರ್ವಭಂಗದ ವಿಜಯೋತ್ಸವವನ್ನು ಆಚರಿಸುವುದಕ್ಕಾಗಿ ಅಶ್ವತ್ಥಾಮನನ್ನು ಜೊತೆಯಲ್ಲಿ ಕರಕೊಂಡು ಶಬರರೊಂದಿಗೆ ಬೇಟೆಗೆ ತೆರಳುತ್ತೇನೆ. (ನಿರ್ಗಮನ) (ಅರ್ಜುನನ ಬೇಟೆ)

ರಾಗ ಮುಖಾರಿ । ಏಕ ತಾಳ

ಬೇಟೆಯಾಡುತ್ತ ಬಂದನಾಗ । ವೀರ ಪಾರ್ಥ।
ಬೇಟೆಯಾಡುತ್ತ ಬಂದನಾಗ ॥
ಕಾಡಿನ ಖಗಮೃಗ ಸಂತತಿಯೆಲ್ಲವ।
ನೋಡಿಸಿ ಹಿಡಿಯುತ ಕಟ್ಟುತ ಕಡಿಯುತ ॥೧॥
ಅದೊ ಶಾರ್ದೂಲವು ಕರಡಿ ವರಾಹವು ।
ಇದೊ ಬಂತೀಗಲೆ ಹೊಡೆಯಿರಿ ಬಾಣವ॥೨॥

ಅರ್ಜುನ : ಅಶ್ವತ್ಥಾಮಾ, ನೀನು ಆ ಕಡೆಯಿಂದ ಪ್ರಾಣಿಗಳನ್ನು ಅಟ್ಟಿಸಿಕೊಂಡು ಬಾ. ನಾನು ಈ ಕಡೆಯಿಂದ ಅವುಗಳನ್ನು ಅಡ್ಡಗಟ್ಟಿ ಮರ್ದಿಸುತ್ತೇನೆ.

ಅಶ್ವತ್ಥಾಮ : ಆಗಲಿ (ತೈತತಕತ)(ಇಬ್ಬರೂ ನಿರ್ಗಮನ)

ರಾಗ ಮಧು ಮಾಧವಿ । ತ್ರಿವುಡೆ ತಾಳ

ಇತ್ತ ಕಾಂತಾರದಲಿ ಬಚ್ಚನು। ಮೆತ್ತಿ ಮಣ್ಣಲಿ ಗುರುಗಳಾ ಕೃತಿ।
ಚಿತ್ತದಲಿ ಪೂಜಿಸುತ ಕಲಿತನು। ಹೊತ್ತು ಕಳೆಯದೆ ನಿತ್ಯದಿ ॥೧॥

ಏಕಲವ್ಯ : ಯಾವುದಕ್ಕೂ ಯೋಗ ಅನ್ನುವುದು ಬೇಕು. ಹಸ್ತಿನಾವತಿಯಲ್ಲಿ ದ್ರೋಣರ ಮನೆಯಾಳಾಗಿಯಾದರೂ ವಿದ್ಯೆ ಕಲಿಯುವ ಭಾಗ್ಯ ಒದಗಿತ್ತು. ಆದರೆ ನನಗೆ ಯೋಗವಿಲ್ಲ. ತಂದೆಯವರು ಗತಿಸಿದರೆಂದು ತಿಳಿದು ಮನೆಗೆ ಹಿಂದಿರುಗಿದ ನನಗೆ ಈ ಕಾಂತಾರವಾಸವೇ ಗತಿಯಾಯಿತು. ಅಮ್ಮನನ್ನೊಬ್ಬಳನ್ನೇ ಬಿಟ್ಟು ಹಸ್ತಿನೆಗೆ ಹೋಗಲಾಗಲಿಲ್ಲ. ಹಾಗೆಂದು ಬಿಲ್ವಿದ್ಯೆಯನ್ನು ಕಲಿಯಬೇಕೆಂಬ ಆಸೆಯೂ ಬಿಡಲಿಲ್ಲ. ಮನಸ್ಸಿದ್ದರೆ ಮಾರ್ಗವಿದೆ ಎನ್ನುತ್ತಾರಲ್ಲಾ! ಹಾಗೆ ನನಗೊಂದು ಉಪಾಯ ಹೊಳೆಯಿತು. ಗುರುಗಳ ಮೂರ್ತಿಯನ್ನು

ನಿರ್ಮಿಸಿ ಗುರುದೇವನನ್ನು ಆವಾಹಿಸಿ ಶಸ್ತ್ರಾಭ್ಯಾಸಕ್ಕೆ ತೊಡಗುತ್ತೇನೆ. ಆಗ ಗುರುಗಳು ನಿಜರೂಪದಲ್ಲಿ ಬಂದು ಬೋಧಿಸಿದಂತೆ ಭಾಸವಾಗುತ್ತದೆ. ಹೊಸ ಹೊಸ ಶರಪ್ರಯೋಗಗಳ ತಿಳುವಳಿಕೆ ಮೂಡುತ್ತದೆ. ವೇಳೆ ಕಳೆಯುವುದು ಸರಿಯಲ್ಲ. ಶಸ್ತ್ರಾಭ್ಯಾಸಕ್ಕೆ ತೊಡಗುತ್ತೇನೆ.

ತಾಯಿ : ಬಚ್ಚಾ, ಏ ಬಚ್ಚಾ, ಎಲ್ಲಿದ್ದೀಯೊ? ಏನ್ಮಾಡ್ತಾ ಇದ್ದಿ?

ಬಚ್ಚ : ಶಸ್ತ್ರಾಭ್ಯಾಸ ಮಾಡುತ್ತಿದ್ದೇನಮ್ಮಾ.

ತಾಯಿ : ಎಷ್ಟದು ಮಾಡಿದ್ದನ್ನೇ ಮಾಡುವುದು ? ನೀನು ಊಟಕ್ಕೆ ಬರುದಿಲ್ವೇನೋ?

ಬಚ್ಚ : ಇಲ್ಲಮ್ಮಾ, ನನಗೀಗ ಹಸಿವಿಲ್ಲ.

ತಾಯಿ : ನೀನು ಹೀಗೇ ಹೇಳ್ತಿಯಂತ ನನಗೆ ಗೊತ್ತು. ಅದಕ್ಕೇ ನಾನು ಬುತ್ತಿ ಕಟ್ಟಿಕೊಂಡೇ ಬಂದೆ. ಇಗೋ ಊಟ ಮಾಡು (ಏಕಲವ್ಯ ಬುತ್ತಿಯನ್ನು ತೆಕ್ಕೊಂಡು ಗುರುಗಳ ಮೂರ್ತಿಯ ಮುಂದಿಡುತ್ತಾನೆ)

ತಾಯಿ : ಏನೋ ಅದು? ಎಂಥದದು ಗೊಂಬೆ? ಹೊಸ ಬೇಂಟೆ ದೇವರೇನೋ?

ಬಚ್ಚ : ಬೇಂಟೆ ದೇವರಲ್ಲ, ಈ ಗೊಂಬೆ ಗುರುದೇವರದು.

ತಾಯಿ : ಎಷ್ಟು ದೇವರು ನಿನಗೆ? ನಮಗೆ ಬೇಂಟೆ ದೇವನೊಬ್ಬನೇ ಸಾಕು.

ಬಚ್ಚ : ಇವರು ನನಗೆ ವಿದ್ಯೆ ನೀಡುವ ದೇವರು. ಒಮ್ಮೊಮ್ಮೆ ಕನಸಿನಲ್ಲೂ ಒಂದು ಹೇಳಿಕೊಡುತ್ತಾರೆ. ಅಮ್ಮಾ ನೀನೀಗ ಹೋಗು. ನಾನೊಂದಿಷ್ಟು ವಿಶ್ರಾಂತಿ ಪಡೆದು ಮತ್ತೆ ಅಭ್ಯಾಸ ಮಾಡುತ್ತೇನೆ.

ತಾಯಿ : ಊಟ ಮಾಡಲು ಮರೀಬೇಡ ಮತ್ತೆ. ನಾನೀಗ ಹೋಗ್ತೇನೆ.(ನಿರ್ಗಮನ)

ಬಚ್ಚ : ಅಮ್ಮನ ಪ್ರೀತಿಯ ಮುಂದೆ ಯಾವ ದೇವರೂ ಇಲ್ಲ. ಹಾಗಾಗಿಯೇ ನಾನು ಹಸ್ತಿನೆಗೆ ಹೋಗಿಲ್ಲ. ಏನು ಮಾಡಲಿ. ಈಗಂತೂ ಹಸಿವಿಲ್ಲ. ಒಂದಿಷ್ಟು ಹೊತ್ತು ನಿದ್ರೆ ಮಾಡುತ್ತೇನೆ. (ಮಲಗುತ್ತಾನೆ)

ಭಾಮಿನಿ

ಗುರುವ ಧ್ಯಾನಿಸಿ ಧನುವ ನೊರಗಿಸಿ ।
ಮರಕೆ ಒರಗುತ ನಿದ್ರೆ ಗೈಯಲು।
ತರಳ ಕನಸಲಿ ಕಂಡ ಗುರುತಾನ್ಯೆದಿದನು ಬಳಿಗೆ ॥
ಕರವ ಜೋಡಿಸೆ ಕೈಯ ತುತ್ತನು।
ಗುರುವು ಉಣಿಸಿದ ಶಬ್ದವೇಧೀ।
ಶರ ಪ್ರಯೋಗವ ಕಲಿಸಿ ತೆರಳಿದ ಬಳಿಕ ಕಣ್ತೆರೆದು॥೧॥

(ಕನಸಿನಲ್ಲಿ ದ್ರೋಣನು ಬಂದು ವಿದ್ಯಾಭ್ಯಾಸ ಕಲಿಸುವ ನಾಟ್ಯವನ್ನು ಅಳವಡಿಸಬೇಕು. ದ್ರೋಣನು ಕನಸಲ್ಲಿಯೇ ನಿರ್ಗಮಿಸಿದ ಬಳಿಕ ಬಚ್ಚನಿಗೆ ಎಚ್ಚರ.)

ರಾಗ ಸಾವೇರಿ । ರೂಪಕ ತಾಳ

ಕಂಡೆನು ಕನಸೊಂದನು । ದ್ರೋಣನು ಕೈಯ । ಕೊಂಡೆಬ್ಬಿಸಿದ ನೆನ್ನನು॥
ಉಂಡೆನು ಗುರುಕೈಯ ತುತ್ತನು । ಬಳಿಕ ಕೋ ।
ದಂಡದಿ ಶಬ್ದವೇಧಿಯ ಮರ್ಮ ಕಲಿಸಿದ ॥೧॥

ಏಕಲವ್ಯ : ಇದೇನು ವಿಚಿತ್ರ ! ಗುರುಗಳು ಕನಸಿನಲ್ಲಿ ಬಂದು ಮಾತಾಡಿಸಿದಂತೆ ಭಾಸವಾಯಿತು. ·ಇತ್ತೀಚೆಗೆ ಆಗಾಗ ಕನಸಿನಲ್ಲಿ ಗುರುಗಳು ಬಂದು ವಿಶಿಷ್ಟ ಮಂತ್ರಾಸ್ತ್ರಗಳನ್ನು ಕಲಿಸಿದ ಅನುಭವ ಆಗುತ್ತದೆ. ನಿದ್ರಿಸಿದಾಗ ಇಲ್ಲದಿದ್ದ ಪರಿಣತಿ ನಿದ್ರೆಯಿಂದ ಎಚ್ಚೆತ್ತಾಗ ಉಂಟಾಗುತ್ತಿದೆ. ಈಗಲೂ ಹಾಗೇ ಆಯಿತು. ಗುರುಗಳು ಕನಸಿನಲ್ಲಿ ಬಂದರು. ನನಗೆ ಊಟ ಮಾಡಿಸಿದರು. ಮೈದಡವಿ ರೋಮಾಂಚನಗೊಳಿಸಿದರು. ಅಲ್ಲದೆ ನನಗೆ ಶಬ್ದವೇಧಿ ಬಾಣ ಪ್ರಯೋಗದ ಸೂಕ್ಷ್ಮಗಳನ್ನು ತಿಳಿಸಿದರು. ನಾನೇ ಧನ್ಯ. ಈಗಲೇ ಅಭ್ಯಾಸಕ್ಕೆ ತೊಡಗುತ್ತೇನೆ.

(ಧಿತ್ತತ್ತತ್ತಾ ಧಿಕುತಕ ತಕತಕ ಧಿಕುತಕ ತಕತಕ ಧಿಕುತಕ ತಕತಕಧೀಂ.)

(ಒಂದಿಷ್ಟು ಅಭ್ಯಾಸ ನಡೆಸುತ್ತಲೇ ಏಕಾಗ್ರತೆಗೆ ಭಂಗ)

ಸೌರಾಷ್ಟ್ರ ತ್ರಿವುಡೆ

ಯಾರು ಬಂದರು ನಮ್ಮ ಕಾಡೊಳು ।
ಭಾರಿ ಬಾಣಾ ಹಾನಿ ಗೈವರು ।
ಗಾರು ಗೆಡಿಸುವೆನೀಗ ಲೆನ್ನುತ ತೂರಿ ಶರವ ॥ ೧॥

ಏಕಲವ್ಯ : ನಮ್ಮ ಅಧೀನಕ್ಕೊಳಪಟ್ಟ ವನ ಪ್ರದೇಶಕ್ಕೆ ದೂರದ ಅರಣ್ಯದಿಂದ ಯಾರೋ ದುಷ್ಟಮೃಗಗಳನ್ನು ಅಟ್ಟಿಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಸಾಧು ಪ್ರಾಣಿಗಳಿಗಿದು ಆಪತ್ಕಾಲ. ಏನದು? ಕಾಡು ಹಂದಿಯೊಂದು ಅರಚುತ್ತ ಓಡುವ ಸದ್ದು ಕೇಳಿಸುತ್ತಿದೆ. ಈಗಲೇ ಶಬ್ದವೇಧಿ ಬಾಣವನ್ನು ಪ್ರಯೋಗಿಸುತ್ತೇನೆ. (ಬಾಣಪ್ರಯೋಗ) ಆ ಹಂದಿಯ ಗತಿ ಏನಾಯಿತೆಂದು ನೋಡುವುದಕ್ಕಾಗಿ ಅತ್ತ ಧಾವಿಸುತ್ತೇನೆ. (ಹಂದಿಯನ್ನು ಬೆನ್ನಟ್ಟುತ್ತಿದ್ದ ಅರ್ಜುನನ ಪ್ರವೇಶ. ಹಂದಿ ವೇಷಧಾರಿ ನಿರ್ಗಮನ ದ್ವಾರದ ಬಳಿ ಬೀಳಬೇಕು. ಜೊತೆಯಲ್ಲೇ ಹಿಂಬಾಲಿಸುತ್ತ ಏಕಲವ್ಯ ಬರಬೇಕು. ಅವನನ್ನು ಕಂಡು ಅರ್ಜುನ ಮಾತಾಡಿಸುವುದು)

ಅರ್ಜುನ : ಇದೇನಚ್ಚರಿ. ನಾನು ಬಾಣವೆಸೆಯುವ ಮೊದಲೇ ಎಲ್ಲಿಂದಲೋ ಬಂದ ಬಾಣವೊಂದು ತಾಗಿ ಹಂದಿ ಸತ್ತು ಬಿದ್ದಿತಲ್ಲಾ! ಇದು ಹೇಗಾಯಿತು? ಯಾರು ಬಾಣವೆಸೆದವರು!? ಇಲ್ಲೊಬ್ಬ ವನಚರ ನಿಂತಿದ್ದಾನೆ. ಆತನಲ್ಲೇ ವಿಚಾರಿಸುತ್ತೇನೆ. ಎಲಾ, ಬೆಡರ ಹುಡುಗಾ.

ರಾಗ ಕಾಪಿ / ಅಷ್ಟತಾಳ

ಎಲೆ ಬೇಡರವನೆ ನಿಲ್ಲೆಲವೊ । ಹಂದಿ ।
ಕೊಲಲ್ಬಾಣವೆಸೆದವರಾರು ಪೇಳೆಲವೊ॥
ಬಲುಮೆಯೆಂಬುದು ನಮಗೆ ಸಿದ್ಧ । ಯಾರು ।
ಬಿಲುಗಾರ ನಿನಗಿಲ್ಲಿ ಕಾರ್ಯ ನಿಷಿದ್ಧ ॥೧॥

ಅರ್ಜುನ : ಎಲಾ ವನಚರ ನನ್ನ ಪಾಳಯದ ಮಧ್ಯಕ್ಕೆ ಕಾಲಿಟ್ಟವನು ಯಾರೋ ನೀನು?

ಏಕಲವ್ಯ : ನೀನೆಂದಂತೆ ಓರ್ವ ವನಚರ.

ಅರ್ಜುನ: ನಾನು ನಿನ್ನ ಹೆಸರನ್ನು ಕೇಳಿದೆ. ಹೆಸರಿಲ್ಲವೇ ನಿನಗೆ ? ಅನಾಮಧೇಯನೇ ನೀನು?

ಏಕಲವ್ಯ : ನಮ್ಮ ಜನಗಳ ಮಧ್ಯೆ ನನಗೊಂದು ಹೆಸರಿದೆ ಆದರೆ ಹೆಸರನ್ನು ಮೆರೆಸುವ ಅಹಂಕಾರ ನನಗಿಲ್ಲ. ಅದು ನಿಮ್ಮಂತಹ ನಾಗರಿಕರೆಂದೆನಿಸಿಕೊಂಡವರಿಗಿರುವ ಮನೋಜಾಡ್ಯ.

ಅರ್ಜುನ : ಒಬ್ಬ ಬೇಡನಿಗೂ ಇಷ್ಟೊಂದು ಬಿಂಕವೇ? ನಾವು ಆಳುವವರು. ನೀನು ನಮ್ಮ ಆಳು ಎಂಬ ಎಚ್ಚರವಿದೆಯಷ್ಟೆ?

ಏಕಲವ್ಯ : ನನ್ನ ನೆಲೆಯ ಎಚ್ಚರ ನನಗಿದೆ. ಆದರೆ ನಿನಗಿಲ್ಲ. ನಿನ್ನ ದೊಡ್ಡಸ್ತಿಕೆ ನಿನ್ನ ಊರಲ್ಲಿರಲಿ. ಇದು ನನ್ನಪ್ಪನಿಂದ ನನಗೆ ಬಂದ ಅಡವಿ. ಈಗ ನನ್ನ ಅಧಿಕಾರದ ಪರಿಧಿಯೊಳಗೆ ನೀನು ನಿಂತಿರುವೆ. ನಾನು ಸಂರಕ್ಷಿಸಿದ ಪ್ರಾಣಿಗಳನ್ನು ನೀನು ಕೊಂದಿರುವೆ. ಹಾಗಾಗಿ ನೀನೊಬ್ಬ ಕಳ್ಳ, ಕಟುಕ, ದಂಡನಾರ್ಹ ಅಪರಾಧಿ. ಆದರೂ ನೀನು ಯಾರೆಂದು ನನಗೆ ತಿಳಿದಿದೆ. ನಿನ್ನ ಗುರುಗಳ ಮೇಲಿನ ಗೌರವದಿಂದ ಬಿಟ್ಟು ಬಿಡುತ್ತೇನೆ. ನಾನು ಕೊಂದ ಈ ಹಂದಿಯನ್ನು ಬಿಟ್ಟು ಬೇಗ ನಡೆ.

ಅರ್ಜುನ : (ನಗುತ್ತ) ಏನೆಂದೇ? ಈ ಹಂದಿಯನ್ನು ನೀನು ಕೊಂದೆಯಾ? ಕಣ್ಣಳತೆಯಲ್ಲಿ ಬಿಡು, ಕೂಗಳತೆಯಲ್ಲಿಯೂ ಇಲ್ಲದ ನೀನು ಹಂದಿಯನ್ನು ಕೊಲ್ಲಲು ಹೇಗೆ ಸಾಧ್ಯ ?

ಏಕಲವ್ಯ : ಶಬ್ದವೇಧಿ ಶರ ಪ್ರಯೋಗದಿಂದ.

ಅರ್ಜುನ : ನನ್ನಂತಹ ಚಾಣಾಕ್ಷ ಬಿಲ್ಗಾರನಿಗೇ ಕಷ್ಟದಿಂದ ಸಿದ್ಧಿಸಿದ ಶಬ್ದವೇಧೀ ಶರಪ್ರಯೋಗ ನಿನಗೆ ಅಂಗೈ ನೆಲ್ಲಿಕಾಯಿಯಲ್ಲವೇ?

ಏಕಲವ್ಯ : ನಿಜಕ್ಕೂ ಹೌದು.

ಅರ್ಜುನ : ಹೌದಾದರೆ ಹೇಳು. ನಿನಗೆ ಕಲಿಸಿದವರಾರು ?

ಏಕಲವ್ಯ: ಅದೋ, ಹಂದಿಯ ಮೈಯಲ್ಲಿ ನೆಟ್ಟ ಬಾಣದಲ್ಲಿ ನನ್ನ ಹೆಸರಿದೆ. ನೋಡಿಲ್ಲಿ. (ಬಾಣವನ್ನು ತೆಗೆದುಕೊಡುವನು)

ಅರ್ಜುನ : (ಬಾಣವನ್ನು ನೋಡಿ) 'ದ್ರೋಣ ಶಿಷ್ಯ." ಅದು ನಾನಲ್ಲದಿನ್ನಾರು?

ಏಕಲವ್ಯ : ಆದರೆ ಅದು ನಿನ್ನ ಬಾಣವೆ?

ಅರ್ಜುನ : ಅಲ್ಲ. ಇದು ನನ್ನ ಬಾಣವಲ್ಲ.

ಏಕಲವ್ಯ : ನಿಜ ನುಡಿದೆ. ಅದು ನನ್ನ ಬಾಣ.

ಅರ್ಜುನ : (ಕೋಪಗೊಂಡು) ಎಲೈ ವ್ಯಾಧ, ಸತ್ಯ ಹೇಳು.

ರಾಗ ಸಾವೇರಿ / ಮಟ್ಟೆತಾಳ

ಸತ್ಯ ಪೇಳು ನೀನು ದ್ರೋಣ ಶಿಷ್ಯನೆಂತೆಲಾ ।
ಕತ್ತರಿಸುವೆ ನಾಲಗೆಯನು ಧೂರ್ತ ತಿಳಿಯೆಲಾ ॥೧॥

ಅರ್ಜುನ : ಎಲಾ ವ್ಯಾಧರ ಹುಡುಗ, ನಿನ್ನ ಅಧಿಕ ಪ್ರಸಂಗಿತನ ಹೆಚ್ಚಾಯಿತು. ದ್ರೋಣರೆಂದರೆ ಯಾರು ? ಯಾರಿಗೆ ಕಲಿಸುವವರು? ಇದ್ಯಾವುದರ ಶಿಕ್ಯಾಚಾರವೂ ಇಲ್ಲದೆ ಮಾತಾಡುತ್ತೀಯಲ್ಲಾ ? ನೀನು ಹೇಗೋ ದ್ರೋಣರ ಶಿಷ್ಯನಾಗುವುದು?

ಏಕಲವ್ಯ : ನೀನು ಹೇಗೋ ನಾನೂ ಹಾಗೆ.

ಅರ್ಜುನ : ನಾಲಗೆ ಬಿಗಿಹಿಡಿದು ಮಾತಾಡು. ದ್ರೋಣರಿಗೆ ನಾನೊಬ್ಬನೇ ಮೆಚ್ಚಿನ ಶಿಷ್ಯ.

ಏಕಲವ್ಯ : ಅದು ಹೇಗೆ ಹೇಳುತ್ತಿ?

ಅರ್ಜುನ : ಗೊತ್ತಿಲ್ಲವೇ ನಿನಗೆ ? ತ್ರಿಲೋಕವೀರ ಅರ್ಜುನನ ಹೊರತು ದ್ರೋಣರಿಗೆ ಬೇರೆ ಮೆಚ್ಚಿನ ಶಿಷ್ಯರಿಲ್ಲ.

ಏಕಲವ್ಯ : ದ್ರೋಣರ ಮನಸ್ಸಿಗೆ ಹೇಗೋ ಗೊತ್ತಿಲ್ಲ. ನನ್ನ ಗುರುಭಕ್ತಿಯಲ್ಲಿ ನಾನು ಬೇರಾವ ಶಿಷ್ಯರಿಗೂ ಕಡಿಮೆ ಇಲ್ಲ.

ಅರ್ಜುನ : ಆದರೆ ನಿನಗೆ ದ್ರೋಣರು ವಿದ್ಯೆ ಕಲಿಸಿದ್ದಾರೆಂಬುದಕ್ಕೆ ಸಾಕ್ಷಿ ಏನು?

ಏಕಲವ್ಯ : ನಾನು ಪ್ರಯೋಗಿಸಿದ ಈ ಶಬ್ದವೇಧಿ ಬಾಣ.

ಅರ್ಜುನ : ನನಗಲ್ಲದೆ ಇನ್ನೊಬ್ಬರಿಗೆ ಈ ವಿದ್ಯೆ ಸಿದ್ಧಿಸದೆಂದು ಹೇಳಿದ್ದಾರೆ ಗುರುಗಳು. ಆಕಸ್ಮಿಕವಾಗಿ ನಿನ್ನ ಗುರಿ ಈ ಬಾರಿ ಸರಿಯಾಗಿರಬಹುದು. **(ಅಷ್ಟರಲ್ಲಿ ಅರ್ಜುನನನ್ನು ಹುಡುಕುತ್ತಿದ್ದ ಅಶ್ವತ್ಥಾಮ ಅಲ್ಲಿಗೆ ತಲುಪುತ್ತಾನೆ.)**

ಅಶ್ವತ್ಥಾಮ : ಹಾಂ. ಏಕಲವ್ಯ, ನೀನಿಲ್ಲಿ.

ಏಕಲವ್ಯ : ಇದೇನಚ್ಚರಿ, ಗುರುಪುತ್ರ, ನೀನೂ ಈತನೊಂದಿಗಿರುವೆಯಾ ?

ಅಶ್ವತ್ಥಾಮ : ಹೌದು ಮಿತ್ರಾ. ಅರ್ಜುನಾ, ಈತ ಏಕಲವ್ಯ. ಅಂದು ವಿದ್ಯಾರ್ಜನೆಗಾಗಿ ಗರಡಿಗೆ ಬಂದವನು. ಅರ್ಧದಲ್ಲೇ ಶಿಕ್ಷಣ ನಿಲ್ಲಿಸಿದಾತ.

ಅರ್ಜುನ : ಓಹೋ, ಆ ಏಕಲವ್ಯನೇ? ಇರಲಿ, ಉತ್ತಮ ಸಾಧನೆ ಮಾಡಿದ್ದಾನೆ. ಅಭಿನಂದನೆ. ಅಶ್ವತ್ಥಾಮ ನಾವಿನ್ನು ತೆರಳೋಣ.

ಅಶ್ವತ್ಥಾಮ : ಏಕಲವ್ಯ, ಚೆನ್ನಾಗಿರುವೆಯಷ್ಟೇ. ನಾವಿನ್ನು ಬರುತ್ತೇವೆ. ನಿನ್ನ ಸಾಧನೆಗೆ ನನ್ನ ಅಭಿನಂದನೆ.

ಏಕಲವ್ಯ : ಗುರುಪುತ್ರಾ, ಗುರುಗಳು ಚೆನ್ನಾಗಿರುವರೇ?

ಅಶ್ವತ್ಥಾಮ : ಚೆನ್ನಾಗಿದ್ದಾರೆ ಏಕಲವ್ಯ.

ಏಕಲವ್ಯ : ಅವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳನ್ನು ತಿಳಿಸು.

ಅಶ್ವತ್ಥಾಮ : ಆಗಲಿ, ನಾನೀಗ ತೆರಳುತ್ತೇನೆ. (ನಿರ್ಗಮನ)

ಏಕಲವ್ಯ : ಹಸ್ತಿನೆಯಿಂದ ಹಿಂದಿರುಗಿದ ಬಳಿಕ ಗುರುಗಳನ್ನು ಕಾಣಲು ಒಮ್ಮೆಯೂ ಹೋಗಲಾಗಿಲ್ಲ. ಇದೀಗ ಗುರುಪುತ್ರನಾದರೂ ಕಾಣಸಿಕ್ಕಿದನಲ್ಲಾ. ಅದೇ ಒಂದು ಭಾಗ್ಯ. ಮನೆಯಲ್ಲಿ ಅಮ್ಮ ಕಾಯುತ್ತಿರಬಹುದು. ಬೇಗನೇ ತೆರಳುತ್ತೇನೆ. (ನಿರ್ಗಮನ)

(ದ್ರೋಣನ ಪ್ರವೇಶ)

ರಾಗ ನೀಲಾಂಬರಿ । ಝಂಪೆತಾಳ

ಏನ ಮಾಡಲಿ ಪಾರ್ಥನಿಂಗೆ । ನಾ ವಚನ।
ದಾನ ಮಾಡಿದುದಕ್ಕೆ ಬಂತೀಗ ಹೀಗೆ ॥
ಮಾನವುಳಿಸಲು ಶಿಕ್ಷೆ ತರವೆ । ಏಕಲವ್ಯ ।
ಗೇನೆಂದು ಪೇಳಲೆನ್ನಯ ಬಾಳ್ವೆಗುಣವೆ॥೧॥

ದ್ರೋಣ : ಜಗತ್ತಿನಲ್ಲಿ ಸರಿಸಾಟಿಯಿಲ್ಲದಂತಹ ಒಬ್ಬ ವೀರನನ್ನಾಗಿ ಅರ್ಜುನನನ್ನು ರೂಪಿಸುತ್ತೇನೆಂದು ವಚನವಿತ್ತದ್ದು ಈಗ ನನ್ನ ಕೊರಳಿಗೇ ಉರುಳಾಯಿತು. ಈ ಮಾತನ್ನು ಉಳಿಸಿಕೊಳ್ಳುವ ಮೂಲಕ ನನ್ನ

ಮಾನವುಳಿಸಿ ಕೊಳ್ಳಬೇಕಿದ್ದರೆ ಆ ಬಡಪಾಯಿ ಏಕಲವ್ಯನನ್ನು ಬಲಿಪಶು ಮಾಡಬೇಕಾಗುತ್ತದೆ. ಏನು ಮಾಡಲಿ ? ಹೇಗೆ ಈ ಸಂಕಟದಿಂದ ಪಾರಾಗಲಿ ?

ಅಶ್ವತ್ಥಾಮ : ಅಪ್ಪಾ, ಏಕೆ ಚಿಂತಾಕ್ರಾಂತರಾಗಿ ಕುಳಿತಿದ್ದೀರಿ?

ರಾಗ ಕಾಂಬೋಜ । ಅಷ್ಟತಾಳ

ಬೇಗುದಿಯೇಕೆನ್ನ ಜನಕ । ಚಿಂತೆ ।
ನೀಗುವೆ ನಾ ಕೊನೆ ತನಕ ॥
ಬೇಗನೆ ಪೇಳಿರಿ ಯಾರಿಂದ ನೋವೆಂದು ।
ಬಾಗುತ ಕೇಳ್ದನು ತಾನ ಶ್ವತ್ಥಾಮನು।

ಅಶ್ವತ್ಥಾಮ : ಏಕಲವ್ಯನಿದ್ದೆಡೆಗೆ ಹೋಗೋಣವೆಂದು ನೀವೇ ಸೂಚಿಸಿದ ಪ್ರಕಾರ ಈ ಕಾಡಿನಲ್ಲಿ ನಿಮ್ಮನ್ನು ನಡೆಸಿಕೊಂಡು ಬಂದೆ. ಒಂದಿಷ್ಟು ಹೊತ್ತು ಈ ಕಲ್ಲಿನ ಮೇಲೆ ಕುಳ್ಳಿರೆಂದು ಹೇಳಿ ಮುಂದಿನ ದಾರಿಯನ್ನು ಗುರುತಿಸುವುದಕ್ಕಾಗಿ ನಾನತ್ತ ನಡೆದೆ. ಆದರೆ ಈಗ ಇಲ್ಲಿ ಬಂದು ನೋಡಿದರೆ ನೀವು ಚಿಂತಿಸುತ್ತ ಕುಳಿತಿದ್ದೀರಿ. ಯಾಕೆ ಅಪ್ಪಾ? ಯಾರಿಂದ ಏನು ಆಪತ್ತು ಬಂದಿದೆ? ನಾನು ನಿವಾರಿಸಿಕೊಡುತ್ತೇನೆ.

ದ್ರೋಣ : ಬೇರಾರಿಂದಲೂ ಅಲ್ಲ ಮಗಾ, ನನ್ನದೇ ಅಹಂಕಾರ......

ರಾಗ ತುಜಾವಂತು । ಝಂಪೆತಾಳ

ನನ್ನಹಂ ಕೃತಿಯ ಫಲವುಣ್ಣುತಿಹೆ ಕಂದ ।
ಇನ್ನು ಬಿಡುಗಡೆಯಿಲ್ಲ ಅನ್ನ ಋಣದಿಂದ ॥
ತರಳ ಪಾರ್ಥನು ದ್ರುಪದ ನನ್ನೆಳೆದು ತಂದುದಕೆ ।
ಹರುಷದಿಂದಲಿ ಪೇಳ್ದೆ ಜಗದೇಕ ವೀರ ॥
ಭರವಸೆಯ ನೀಡಿದೆನು ದ್ರೋಣ ನಿಂಗಿನ್ನಿಲ್ಲ ॥
ಪರಮ ಶಿಷ್ಯನು ಪಾರ್ಥನನ್ನುಳಿದು ಬೇರೆ ॥

ದ್ರೋಣ : ಮಗೂ ಅಶ್ವತ್ಥಾಮ, ಕೆಲವೊಂದು ಸಂದರ್ಭಗಳು ನಮ್ಮನ್ನು ಅನಪೇಕ್ಷಿತವಾದ ಸಂಬಂಧಗಳ ಜಾಲಕ್ಕೆ ತಳ್ಳುತ್ತವೆ. ನನ್ನ ಬದುಕಿನಲ್ಲೂ ಹಾಗೇ ಆಯಿತು. ಅತ್ಯಂತ ದಾರುಣವಾದ ಬಡತನದ ರುಚಿಯನ್ನು ಉಂಡವನು ನಾನು. ನೀನೇ ಮಗುವಾಗಿದ್ದಾಗ ಹಾಲು ಬೇಕೆಂದು ಹಟ ಹಿಡಿಯುತ್ತಿದ್ದೆ. ಬಿಡಾರದಲ್ಲಿ ಒಂದು ತೊಟ್ಟೂ ಹಾಲಿರುತ್ತಿರಲಿಲ್ಲ. ಆಗ ನೀರಲ್ಲಿ ಹಿಟ್ಟನ್ನು ಬೆರೆಸಿ ಅದನ್ನೇ ಹಾಲೆಂದು ಕುಡಿಸುತ್ತಿದ್ದಳು ನಿನ್ನ ಅಮ್ಮ. ಈ ದುಸ್ಥಿತಿಗೆ ಅಂತ್ಯ ಹಾಡುವುದಕ್ಕಾಗಿ ನನ್ನ ಬಾಲ್ಯ

ಸ್ನೇಹಿತನಾಗಿದ್ದ ರಾಜಾ ದ್ರುಪದನಲ್ಲಿಗೆ ಹೋಗಿ ಅವಮಾನಿತನಾದದ್ದು, ಸೇಡು ತೀರಿಸಲು ನಿರ್ಧರಿಸಿದ್ದು, ನನ್ನ ಶಿಷ್ಯನಾದ ಅರ್ಜುನನು ಸಲ್ಲಿಸಿದ ಗುರುದಕ್ಷಿಣೆಗಾಗಿ ಆತನನ್ನು ಸರಿಸಾಟಿಯಿಲ್ಲದ ವೀರನನ್ನಾಗಿ ರೂಪಿಸುವ ಭರವಸೆಯಿತ್ತದ್ದು ಇದಾವುದೂ ಅಪೇಕ್ಷಿಸಿ ಮಾಡಿದ್ದಲ್ಲ ಮಗಾ. ಎಲ್ಲವೂ ಸಂದರ್ಭಗಳ ಒತ್ತಡದ ಫಲ. ಒಂದು ಅಹಂಕಾರದ ಮತ್ತು ಸೇಡಿನ ಗರ್ಭದಲ್ಲಿ ಮತ್ತೊಂದು ಅಹಂಕಾರ ಮತ್ತು ಸೇಡಿನ ಅಂಕುರವಾಗಿರುತ್ತದೆ. ಈಗ ಅರ್ಜುನನ ಅಹಂಕಾರದ ಬೆಂಕಿ ನನ್ನನ್ನು ಕಾಡಿದೆ.

ಅಶ್ವತ್ಥಾಮ : ಹೌದೇ ಜನಕಾ. ನಾನು ಆ ಅರ್ಜುನನ ಅಹಂಕಾರವನ್ನು ಇಳಿಸುತ್ತೇನೆ.

ದ್ರೋಣ : ಹೌದಪ್ಪ. ನನಗೆ ಗೊತ್ತು. ನೀನು ಅಷ್ಟು ಮಾಡಬಲ್ಲೆ. ಆದರೆ ನಂತರ ನಿನ್ನ ಅಹಂಕಾರದ ಬೆಂಕಿ ವ್ಯಾಪಿಸುತ್ತದೆ.

ಅಶ್ವತ್ಥಾಮ : ಅಂದರೆ, ಇದಕ್ಕೆ ಪರಿಹಾರವೇನು?

ದ್ರೋಣ : ಅದಕ್ಕಾಗಿಯೇ, ನಾನೀಗ ಏಕಲವ್ಯನಲ್ಲಿಗೆ ಹೊರಟಿರುವುದು.

ಅಶ್ವತ್ಥಾಮ : ಅಂದರೆ ಅರ್ಜುನನ ಅಹಂಕಾರದ ಬೆಂಕಿಯಿಂದ ಏಕಲವ್ಯನನ್ನು ಸುಡುತ್ತೀರೇನು?

ದ್ರೋಣ : ಛೇ, ಛೇ ಅಂತಹ ಮಾತಾಡಬೇಡ ಕಂದಾ. ನಾನಾಗಿ ಏಕಲವ್ಯನಿಗೆ ಅನ್ಯಾಯ ಮಾಡಲಾರೆ. ಹೀಗೇಕಾಯಿತೆಂದು ಆತನನ್ನೇ ಕೇಳುತ್ತೇನೆ.

ಅಶ್ವತ್ಥಾಮ : ಆದರೆ ನನ್ನ ಮಿತ್ರನಿಗೆ ಅನ್ಯಾಯವಾಗಬಾರದು ಮತ್ತೆ.

ದ್ರೋಣ : ಆಗಲಿ ಕಂದ, ಈ ಸಮಸ್ಯೆಯಿಂದ ನನ್ನನ್ನು ಪಾರು ಮಾಡುವ ಸೂತ್ರವನ್ನು ದೇವರು ಈಗಾಗಲೇ ಹೆಣೆದಿರಬಹುದು. ಶುಭಾಕಾಂಕ್ಷಿಗಳಾಗೋಣ.

ಅಶ್ವತ್ಥಾಮ : ಜನಕಾ, ಏಕಲವ್ಯನಿಗೆ ನಾನು ಈಗಾಗಲೇ ನಮ್ಮ ಪ್ರಯಾಣದ ಬಗ್ಗೆ ಹೇಳಿ ಕಳಿಸಿದ್ದೇನೆ. ಇದೇ ಪರ್ವತದ ಬುಡದಲ್ಲಿ ಆತನ ಆಳುಗಳು ನಮಗಾಗಿ ಕಾಯುತ್ತಿದ್ದಾರೆ.

ದ್ರೋಣ : ಹೌದೇ, ಹಾಗಿದ್ದರೆ ನಾನು ಅವರೊಡನೆ ಏಕಲವ್ಯ ನಿದ್ದೆಡೆಗೆ ಸಾಗುತ್ತೇನೆ. ನೀನು ಮನೆಗೆ ಹಿಂತಿರುಗು.

ಅಶ್ವತ್ಥಾಮ : ಇಲ್ಲಪ್ಪಾ, ನಾನು ನಿಮ್ಮೊಡನೆ ಬಂದೇ ಬರುತ್ತೇನೆ.

ದ್ರೋಣ : ಬೇಡ ಮಗಾ, ಬೇಡವೇ ಬೇಡ. ನೀನು ಬಂದರೆ ನನ್ನ ಧರ್ಮಸಂಕಟ ಇಮ್ಮಡಿಯಾದೀತು. ನಾನೇ ಸಮಸ್ಯೆಗೆ ಪರಿಹಾರ ರೂಪಿಸಿ ಬರುತ್ತೇನೆ.

ಅಶ್ವತ್ಥಾಮ : ನೀವು ಹೇಳಿದಂತಾಗಲಿ ಆದರೆ ಪುನಃ ನೆನಪಿಸುತ್ತೇನೆ ಕರ್ಣನಿಗೆ ಪರಶುರಾಮರು ಮಾಡಿದಂತೆ ನೀವು ಏಕಲವ್ಯನಿಗೆ ಮಾಡಿಬಿಡಬೇಡಿ ಮತ್ತೆ.

ದ್ರೋಣ : ಛೀ, ಅಷ್ಟೊಂದು ಹಗುರವಾಗಿ ದೊಡ್ಡವರನ್ನು ಹಳಿಯಬೇಡ. ದಿವ್ಯ ಲೀಲಾಯೋಗ ಫಲ ಹೇಗಿರುತ್ತದೆಂಬುದು ನಮಗೆ ತಿಳಿಯದ ವಿಚಾರ. ಸುಮ್ಮನೆ ನಡೆ. (ಅಶ್ವತ್ಥಾಮ ಮಾತಾಡದೆ ನಮಸ್ಕರಿಸಿ ಹೋಗುತ್ತಾನೆ. ದ್ರೋಣರು ನಂತರ ಹೊರಟು "ಏಕಲವ್ಯನ ಆಳುಗಳೊಂದಿಗೆ ಮುಂದುವರಿಯುತ್ತೇನೆ" ಎಂದು ಹೇಳಿ ನಿರ್ಗಮನ.)

(ತೆರೆಯಲ್ಲಿ ದ್ರೋಣನ ಮೂರ್ತಿಯನ್ನು ತಂದಿಟ್ಟು, ಏಕಲವ್ಯನು ನಮಸ್ಕರಿಸಿ ಕುಳಿತಿರುವುದು.)

ರಾಗ ಸುರುಟಿ । ಏಕತಾಳ

ಇಂದು ಬರುವ ನೆನುತ । ಗುರುವಿನ । ಬಿಂಬವ ಪೂಜಿಸುತ ।
ವಂದಿಸಿ ಶಸ್ತ್ರಾಭ್ಯಾಸದಿ ಮುಳುಗಿರೆ ।
ಬಂದಳು ಮಾತೆಯು ಬಚ್ಚನ ಕರೆಯುತ ॥೧॥

(ಏಕಲವ್ಯನಿಗೆ ಅರ್ಥವಿಲ್ಲ ಏಕಲವ್ಯನ ತಾಯಿ ಪ್ರವೇಶಿಸುತ್ತಲೇ ಪದ್ಯ.)

ಏತಕೆ ಬರಲಿಲ್ಲ । ಊಟಕೆ । ಜಾತನೆ ಸುಳಿವಿಲ್ಲ ॥
ಯಾತಕೆ ಇಲ್ಲಿಯೆ ನಿಂದಿಹೆ ನೀನೀ।
ರೀತಿಯೊಳಿದ್ದರೆ ಸಂಕಟ ಪಡುವೆನು ॥೨॥

ಅಮ್ಮ : ಬಚ್ಚಾ, ಬಚ್ಚಾ ಏನೋ ಇದು? ಯಾವಾಗ ನೋಡಿದರೂ ಆ ಗೊಂಬೆಯ ಮುಂದೆ ಕುಳಿತಿರುತ್ತೀ. ಅದೇನು ದೇವರೋ ? ನಮಗೆ ಬೇಂಟೆ ದೇವರು ಸಾಕು. ಇಂಥದ್ದೆಲ್ಲಾ ಬೇಡ. ಒಂದು ಊಟಕ್ಕೂ ಬರ್ಲಿಕ್ಕಿಲ್ಲ, ತಿಂಡಿಗೂ ಬರ್ಲಿಕ್ಕಿಲ್ಲ. ನೀನು ಹೀಗೆ ಮಾಡಿದರೆ ನಾನು ಊಟ ಮಾಡ್ಲಿಕ್ಕಿಲ್ಲ ನೋಡು.

ಏಕಲವ್ಯ: ಅಮ್ಮ ಹಾಗೆಲ್ಲ ಹೇಳಬೇಡಮ್ಮ. ನೀನು ಊಟ ಮಾಡು. ನನಗಿಂದು ನೋಂಪಿ. ವ್ರತೋಪವಾಸದಲ್ಲಿದ್ದೇನೆ.

ಅಮ್ಮ : ಯಾವ ನೋಂಪಿಯೋ ನಿನಗೆ? ಏಕೋ ಈ ಉಪವಾಸ ?

ಏಕಲವ್ಯ : ಅಮ್ಮಾ, ಇಂದು ನನ್ನ ಗುರುಗಳು ಬರುತ್ತಾರಮ್ಮಾ. ಈ ಗೊಂಬೆ ಗುರುದೇವನದ್ದು. ಸ್ವಾಧ್ಯಾಯದಿಂದ ನಾನು ಶರಪ್ರಯೋಗದ ಜಾಣ್ಮೆ ಗಳಿಸಲು ಈ ಗುರುವಿನ ಆಶೀರ್ವಾದವೇ ಕಾರಣ. ಈ ಗುರುವಿನ ಪುತ್ರ, ಅಶ್ವತ್ಥಾಮ. ಆತ ನನ್ನ ಮಿತ್ರ. ಇಂದು ಗುರು ದ್ರೋಣಾಚಾರ್ಯರೇ ಇಲ್ಲಿಗೆ ಬರುತ್ತಾರೆಂದು ಹೇಳಿ ಕಳಿಸಿದ್ದಾನೆ. ಅಮ್ಮಾ, ನೀನು ಒಳಗಿರು. ಗುರುಗಳು ಬಂದ ಬಳಿಕ ನಾನು ಅವರನ್ನು ಕರೆದುಕೊಂಡು ಬರುವೆ.

ಅಮ್ಮ: ಸುಮ್ಮನೇ ನೆವನ ಹೇಳುವುದಲ್ಲವಷ್ಟೇ?

ಏಕಲವ್ಯ: ಖಂಡಿತ ಅಲ್ಲಮ್ಮ, ನೀನು ಮನೆಯೊಳಗಿರು.

ಅರ್ಧ ಭಾಮಿನಿ

ತಾಯನತ್ತಲು ಕಳಿಸಿರಲು ತಾ। ಸಾಯಕದ ಗುರು ದ್ರೋಣ ಬರುತ್ತಲೆ ।
ಜೀಯ ಬಂದೆಯ ಧನ್ಯನಾದೆನು ಕಾಯಬೇಕೆನುತ॥ (ಮುಂದುವರಿಸಿ)

ರಾಗ ಸೌರಾಷ್ಟ್ರ । ತ್ರಿವುಡೆ

ಧನ್ಯನಾದೆನು ಜೀಯ ಜಗದಲಿ । ಮಾನ್ಯನಾದೆನು ನಿನ್ನ ಶಿಷ್ಯನ ।
ನನ್ನನೆನಿಸುವೆ ದೇವ ಸರ್ವಾ । ರ್ಪಣವು ನಿನಗೆ॥

ಏಕಲವ್ಯ : ಗುರುದೇವಾ, ನನ್ನ ಬದುಕು ಪಾವನವಾಯಿತು. ಜೀವನ ಧನ್ಯವಾಯಿತು ಈ ಬಡವನ ಹುಲ್ಲಿನ ಗುಡಿಸಲಿಗೆ ನಡೆದು ಬಂದಿರಾ ಸ್ವಾಮಿ ! ನಿಮ್ಮ ಆತ್ಮ ಶಕ್ತಿಯಿಂದ ನಿತ್ಯವೂ ಬೆಳಗುತ್ತಿದ್ದ ಈ ಗರಡಿ ಇಂದು ನಿಮ್ಮ ದಿವ್ಯ ಉಪಸ್ಥಿತಿಯಿಂದ ತೇಜೋಮಯವಾಗಿದೆ. "ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ. ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ" (ಅಡ್ಡ ಬೀಳುವನು)

ದ್ರೋಣ: ಮಗೂ ಏಕಲವ್ಯ, ನಿನ್ನ ಸ್ವಾರ್ಜಿತ ಶಕ್ತಿಯ ಮಹತ್ವವನ್ನು ವಿವರಿಸಲು ನನ್ನಲ್ಲಿ ಶಬ್ದಗಳೇ ಇಲ್ಲ. ನೀನು ಶಬ್ದವೇಧಿ ಶರ ಪ್ರಯೋಗವನ್ನು ಸಾಧಿಸಿದೆಯಾ?

ಏಕಲವ್ಯ : ಹೌದು ಗುರುದೇವ, ನೀವೇ ಕನಸಲ್ಲಿ ಬಂದು ಕಲಿಸಿದಿರಿ.

ದ್ರೋಣ : ನಾನು ಕಲಿಸಿದೆನೆ?

ಏಕಲವ್ಯ : ಹೌದು, ನೀವೇ ಕಲಿಸಿದಿರಿ.

ದ್ರೋಣ: ನೋಡು, ಆ ಕಡೆಯಿಂದ ಹಕ್ಕಿಯ ಕೂಗು ಕೇಳುತ್ತಿದೆ. ಅದರ ಮೇಲೆ ಶಬ್ದವೇಧಿ ಶರ ಪ್ರಯೋಗಿಸು ನೋಡೋಣ.

ಏಕಲವ್ಯ : ಇಲ್ಲ ಗುರುಗಳೇ, ನನ್ನ ಸಾಮರ್ಥ್ಯದ ಸಮರ್ಥನೆಗೆ ಆ ನಿಷ್ಪಾಪಿ ಹಕ್ಕಿಯನ್ನು ಬಲಿಗೊಡಲಾರೆ.

ದ್ರೋಣ: ಭೇಷ್ ಏಕಲವ್ಯ ಭೇಷ್, ನಿನ್ನಲ್ಲಿ ವಿದ್ಯೆಯಷ್ಟೇ ಅಲ್ಲ, ಸಂಸ್ಕೃತಿಯೂ ತುಂಬಿದೆ. ಆದರೆ ನರನಿಗ್ಯಾತಕಿದನ್ನು ತೋರಿದೆ?

ಕೇದಾರ ಗೌಳ । ಝಂಪೆ ತಾಳ

ನರನಿಗೇತಕೆ ತೋರ್ದೆಯಾ । ನೀ ಕಲಿತ । ವರ ಶಬ್ದವೇದಿ ವಿದ್ಯೆಯ ॥
ಪರಿತಾಪ ವಾಯ್ತೆನಗದು । ವಚನ ಭಂ । ಗುರವಾಯ್ತು ನೀ ತಿಳಿಯದು ॥೧॥

ದ್ರೋಣ : ಏಕಲವ್ಯ, ಗುರುವಿನ ಗೊಂಬೆಯನ್ನೇ ಸಾಕ್ಷಿಯಾಗಿಟ್ಟುಕೊಂಡು ಏಕಾಗ್ರತೆಯಿಂದ ಅಭ್ಯಾಸ ಮಾಡಿದರೆ ವಿದ್ಯೆ ಕರಗತವಾಗುತ್ತದೆನ್ನುವುದಕ್ಕೆ ನೀನೇ ಒಂದು ಉದಾಹರಣೆ ನಾನು ನೇರವಾಗಿ ಕಲಿಸದೆಯೇ ನಿನಗೆ ಮಂತ್ರಾಸ್ತ್ರಗಳೂ ಶಬ್ದವೇಧಿಯೂ ಸಿದ್ಧಿಸಿರುವುದು ಮಹದಾಶ್ಚರ್ಯದ ಸಂಗತಿ. ಅಷ್ಟೇ ಅಭಿಮಾನದ ಸಂಗತಿಯೂ ಕೂಡ. ಆದರೆ ನೀನು ಹೀಗೇಕೆ ಮಾಡಿದೆ.?

ಏಕಲವ್ಯ : ನಾನೇನಾದರೂ ತಪ್ಪು ಎಸಗಿದೆನೇ ದೇವಾ ?

ದ್ರೋಣ : ನೀನು ತಪ್ಪು ಎಸಗಿಲ್ಲ. ಆದರೆ ಎಸಗಿದ್ದು ತಪ್ಪಾಗಿದೆ.

ಏಕಲವ್ಯ : ಈ ಮಾತಿನ ಗೂಢಾರ್ಥವೇನು ಜೀಯಾ?

ದ್ರೋಣ: ನೀನು ಕರಗತ ಮಾಡಿಕೊಂಡಿರುವ ಶಬ್ದವೇಧಿ ಶರಪ್ರಯೋಗವನ್ನು ಪಾರ್ಥನ ಮುಂದೇಕೆ ಮಾಡಿದೆ ?

ಏಕಲವ್ಯ : ನನ್ನ ಅಭಯಾರಣ್ಯಕ್ಕೆ ಆತ ದುಷ್ಟ ಮೃಗವನ್ನು ಅಟ್ಟಿಸಿದಾಗ ಆದ ಘಟನೆ ಅದು.

ದ್ರೋಣ : ಅದಿರಬಹುದು. ಆದರೆ ನನಗೀಗ ಅದು ಪರಿತಾಪವಾಯ್ತು. ನನ್ನ ವಚನಭಂಗವಾಗುವ ಪರಿಸ್ಥಿತಿಯುಂಟಾಯಿತು.

ಏಕಲವ್ಯ : ಹೌದೆ? ನಿಮ್ಮ ವಚನ ಭಂಗವೇ ?

ರಾಗ ಮಾರವಿ / ಏಕತಾಳ

ಗುರುಗಳೆ ನಿಮ್ಮಯ ವಚನವು ಭಂಗವೆ ।
ಪರಿಹರಿಸುವೆ ದುಗುಡ ॥
ಚರಣದೊಳರ್ಪಣೆ ಸರ್ವಸ್ವವು ನಾ ।
ಪರಿತಪಿಸುವನಲ್ಲ ॥೧॥

ಏಕಲವ್ಯ : ಗುರುಗಳೇ, ಪಾರ್ಥನ ಮುಂದೆ ನಾನು ಶಬ್ದವೇಧಿ ಪ್ರಯೋಗದ ಚಮತ್ಕಾರವನ್ನು ತೋರಿದೆ. ಆದರೆ ಅದು ನಿಮ್ಮ ವಚನ ಭಂಗಕ್ಕೆ ಕಾರಣವಾಗಿದೆ. ಇದು ಹೇಗೆಂದು ನನಗೆ ಅರ್ಥವಾಗುವುದಿಲ್ಲ. ಅದು ಹೇಗಾದರೂ ಇರಲಿ. ನಿಮ್ಮ ದುಗುಡವನ್ನು ಪರಿಹರಿಸುವ ಹೊಣೆ ನನ್ನ ಮೇಲಿದೆ. ಇದಕ್ಕಾಗಿ ನನ್ನ ಸರ್ವಸ್ವವನ್ನೂ ನಿಮ್ಮ ಚರಣಗಳಿಗೆ ಅರ್ಪಿಸುತ್ತಿದ್ದೇನೆ. ನನ್ನದೆನ್ನುವುದೇನನ್ನು ಕಳಕೊಳ್ಳುವುದಿದ್ದರೂ ನನಗದರಲ್ಲಿ ಚಿಂತೆಯಿಲ್ಲ. ಹೇಳಿ ಗುರುದೇವ, ನಿಮ್ಮ ಪರಿತಾಪವನ್ನು ಪರಿಹರಿಸಲು ನಾನೇನು ಮಾಡಬೇಕು?

ದ್ರೋಣ : ಏಕಲವ್ಯ, ಆವೇಶ ಭರಿತನಾಗಬೇಡ. ನೀನು ನನ್ನನ್ನು ಗುರುವೆಂದು ಪರಿಪೂರ್ಣ ಮನಸ್ಸಿನಿಂದ ಒಪ್ಪುವಿಯಷ್ಟೇ ?

ಏಕಲವ್ಯ : ಹೌದು ಗುರುದೇವ, ನನ್ನ ಮನಸ್ಸಾಕ್ಷಿಯಾಗಿಯೂ ಹೌದು.

ದ್ರೋಣ : ಹಾಗಿದ್ದರೆ ಗುರುದಕ್ಷಿಣೆ ನೀಡುವೆಯಾ ?

ಏಕಲವ್ಯ : ನಾನೇ ಕೇಳಬೇಕಾದ ಪ್ರಶ್ನೆಯಿದು. ಗುರುದಕ್ಷಿಣೆಯಾಗಿ ಏನನ್ನು ನೀಡಲಿ ಗುರುಗಳೇ ? ನನ್ನ ಸರ್ವಸ್ವವೂ ನಿಮಗರ್ಪಿತ.

ದ್ರೋಣ : ಸರ್ವಸ್ವವೇನೂ ಬೇಡ. ಬಿಲ್ಲಿಗೆ ಬಾಣವನ್ನು ಹೂಡಿ ಶಿಂಜಿನಿಯನ್ನು ಸೆಳೆದು ಶರಪ್ರಯೋಗಕ್ಕೆ ಬಲಕೊಡುವ ಬಲಗೈಯ ಹೆಬ್ಬೆರಳನ್ನು ನೀಡಿದರೆ ಸಾಕು. (ಏಕಲವ್ಯ ಮೌನ ತಾಳುತ್ತಾನೆ) ಏಕೆ ಏಕಲವ್ಯ ? ಸುಮ್ಮನಿರುವೆ, ದುಃಖವಾಯಿತೆ ?

ಏಕಲವ್ಯ : ಇಲ್ಲ ಗುರುಗಳೇ, ಇಷ್ಟಕ್ಕಾಗಿ ದುಃಖವೇಕೆ ? ನನಗೆ ನಿನ್ನೆಯ ಕನಸಿನ ನೆನಪಾಯ್ತು. ಕನಸಿನಲ್ಲಿ ನೀಲಾಂಗ ನೋರ್ವ ಬಂದು ನನ್ನ ಕೊರಳನ್ನೇ ಕೇಳಿದ. ಅವನ ದಿವ್ಯ ಪ್ರಭೆಗೆ ಮರುಳಾದ ನಾನು ಕೊರಳನ್ನೇ ನೀಡಿದೆ. ಅದರ ಮುಂದೆ ಇದೇನು ಮಹಾ ?

ದ್ರೋಣ : ಹೌದೇ ಏಕಲವ್ಯ? ನಿನ್ನ ಕನಸಿನ ವಿವರ ಕೇಳಿ ಮೈ ಪುಳಕಿತವಾಗುತ್ತದೆ. ನೀನು ದೇವಕಾರ್ಯಕ್ಕೆ ಅರ್ಪಿತನಾದವನು ವತ್ಸ.

ಏಕಲವ್ಯ : ಗುರುಗಳೇ, ನಿಮ್ಮ ಹರಕೆಗಿಂತ ಹೆಚ್ಚಿನ ಸಾಧನೆ ಏನಿದೆ ? ನಿಮ್ಮ ವಚನವೂ ಉಳಿಯಲಿ. ಆ ಅರ್ಜುನನ ಮನಸ್ಸಿನ ಕ್ರೋಧಾಗ್ನಿಯೂ ತಣಿಯಲಿ. ಇದೋ ಬಲಗೈಯ ಹೆಬ್ಬೆರಳನ್ನು ನಿಮ್ಮ ಕಾಲ್ಬುಡದಲ್ಲಿ ಅರ್ಪಿಸುತ್ತೇನೆ. (ಹೆಬ್ಬೆರಳನ್ನು ಕಡಿಯುವನು. ದ್ರೋಣರು ಕಣ್ಮುಚ್ಚಿ ನಿಲ್ಲುತ್ತಾರೆ) ಗಾಯಕ್ಕೆ ಸೊಪ್ಪಿನ ಔಷಧ ಹಚ್ಚಿ ಬರುತ್ತೇನೆ ಗುರುಗಳೇ.

ದ್ರೋಣ : (ಏಕಲವ್ಯ ಮರೆಯಾಗುತ್ತಲೇ) ಅರ್ಜುನನ ಅಸೂಯಾಗ್ನಿಗೆ ಬಲಿಯಾದ ವ್ಯಾಧ ಕುಮಾರನ ಬೆರಳನ್ನೊಮ್ಮೆ ನೋಡುತ್ತೇನೆ. (ನೋಡಲು ಬಾಗುತ್ತಾನೆ. ಅಯ್ಯೋ ಎಂದು ಕಿರಿಚುತ್ತಾನೆ.)

ರಾಗ ನೀಲಾಂಬರಿ । ಝಂಪೆ

ಕಂಡೆನೇನಿದು ರುಧಿರ ಜಲಧಿ । ಪ್ರತಿಬಿಂಬ ।
ರುಂಡ ಕಳಕೊಂಡ ಬರಿ ಮುಂಡ ವೀ ತೆರದಿ ॥
ಕೊಂಡೆ ನೀ ಬಾಲಕನ ಬೆರಳು । ಇದಕೆ ಕಳ ।
ಕೊಂಡೆಯೆನ್ನಯ ಕೊರಳು ತೋರಿತಿದು ನೆರಳು ॥೧॥

ದ್ರೋಣ : ಅಯ್ಯೋ, ಈ ಕಲ್ಲಿನ ಮೇಲೆ ಹರಡಿದ ರಕ್ತದಡೆಯಿಂದ ಒಮ್ಮೆ ಆ ಹೆಬ್ಬೆರಳನ್ನು ನೋಡಲೆಂದು ಬಾಗಿದೆ. ಆದರೆ ನಾನು ಕಂಡದ್ದೇನು ? ಆ ರುಧಿರ ಜಲದಲ್ಲಿ ನನ್ನ ಪ್ರತಿಬಿಂಬವನ್ನು ಕಂಡೆ. ಯಾವುದೋ ಒಂದು ಬಲವಾದ ಕೈ ಬಂದು ನನ್ನ ನೆರಳಿನ ಕೊರಳನ್ನು ಕತ್ತರಿಸುವ ದೃಶ್ಯವನ್ನು ಕಂಡೆ. ರುಂಡ ಕಳಕೊಂಡ ನನ್ನ ಮುಂಡ ವಿಲಿವಿಲಿ ಒದ್ದಾಡುವುದನ್ನು ಕಂಡೆ. ಇದು ನನ್ನ ಭವಿಷ್ಯದ ಸೂಚನೆಯೇ? ಅಲ್ಲ, ಈ ನಿಷ್ಪಾಪಿ ಬಾಲಕನಿಗೆ ಅನ್ಯಾಯವೆಸಗಿದ್ದರ ಪ್ರತಿಫಲವೇ ? ಇರಬಹುದು. ಇರಲೂ ಬಹುದು. ಆದರೆ ಅದನ್ನು ತಪ್ಪಿಸುವ ಸಾಮರ್ಥ್ಯ ನನಗಿಲ್ಲ. ಬಂದುದನ್ನು ಅನುಭವಿಸಲೇಬೇಕು.

(ಏಕಲವ್ಯ ಬಂದು 'ತಾವು ಕೂಗಿಕೊಂಡದ್ದೇಕೆ ಗುರುಗಳೇ ?' ಎನ್ನುತ್ತಾನೆ) ಇಲ್ಲ ಕಂದ ಕೂಗಿದ್ದಲ್ಲ. ಏನೋ ಭ್ರಾಂತಿ ಆವರಿಸಿತ್ತು ಅಷ್ಟೇ. ಬೆರಳಿಗೆ ಕೊರಳು ಉರುಳಿದ ಚಿತ್ರ ಕಂಡಂತಾಯ್ತು.

ಏಕಲವ್ಯ : ಈ ಬೆರಳನ್ನು ತೊಳೆದು ತಂದೀಯಲೇ? ಅರ್ಜುನನಿಗೆ ಸಾಕ್ಷಿ ಕೊಡುವುದಕ್ಕಾದೀತು.

ದ್ರೋಣ : ಅದೇನೂ ಬೇಡ ಏಕಲವ್ಯ. ನೀನು ಆ ಬೆರಳನ್ನು ನಿನ್ನ ತಾಯಿಗೆ ಕಾಣದಂತೆ ಎಚ್ಚರವಹಿಸು. ಶೋಕ ಸಂತಪ್ತ ಮಾತೃಶಾಪ ನನಗೆ ಬಾರದಿರಲಿ. ನಾನಿನ್ನು ಹೊರಡುತ್ತೇನೆ.

ಏಕಲವ್ಯ : ಆಗಲಿ ಗುರುಗಳೇ, ಬಂದ ಕೆಲಸವಾಯಿತಲ್ಲಾ.? ಮನಸ್ಸಿಗೆ ಶಾಂತಿ ಇದೆಯಲ್ಲ.

ದ್ರೋಣ : ಶಾಂತಿ. ಅದರ ಹುಡುಕಾಟ ಮುಗಿಯದು ಮಗೂ. ಬರುತ್ತೇನೆ. ಶಾಂತಿ, ಇನ್ನೆಲ್ಲಿಯ ಶಾಂತಿ ? (ಎನ್ನುತ್ತ ನಿರ್ಗಮನ)

[ಏಕಲವ್ಯ ಆ ಕಡೆಯೇ ನಮಸ್ಕರಿಸಿ ನಿಂತಿರುತ್ತಾನೆ. ಈ ಕಡೆಯಿಂದ ತಾಯಿ ಬರುತ್ತಾಳೆ]

ಅಮ್ಮ : ಏನೋ ಬಚ್ಚ, ಗುರುಗಳಿನ್ನೂ ಬರಲಿಲ್ಲವೇ ? ನೀನಿನ್ನೂ ಊಟಕ್ಕೆ ಬರಲಿಲ್ಲ. ಏನು ಮಾಡ್ತಿದ್ದೀಯೋ ಇಲ್ಲಿ. ಹಾಂ! ಇದೇನು? ಕಲ್ಲಿನ ಮೇಲೆ ರಕ್ತದೋಕುಳಿ. ತುಂಡಾಗಿ ಬಿದ್ದ ಹೆಬ್ಬೆರಳು. ಯಾರದಿದು ? ಬಚ್ಚ ನಿನ್ನದೇನೋ ? ತೋರಿಸು ನಿನ್ನ ಕೈಗಳನ್ನು (ತೋರಿಸುತ್ತಾನೆ) ಅಯ್ಯೋ ಇದು ನಿನ್ನ ಹೆಬ್ಬೆರಳೇ.... ಅರರೇ..... !

ರಾಗ ಭೈರವಿ । ಏಕ

ಅರೆಯುರೆ ಎನ್ನಯ ಮಗನ । ಕೈ ಬೆರಳನು ಕಡಿಸಿ ತೆಗೆದನ ।
ಕೊರಳೇ ಬಲಿ ಪೋಗಲೆಂದು। ಬಲು ಮರುಗುತ ಶಪಿಸಿದಳೆಂದು ॥

ಅಮ್ಮ : ಹಾ, ಶಿವನೇ ನನ್ನ ಮಗನ ಕೈಬೆರಳು ಇಲ್ಲಿ ಅನಾಥವಾಗಿ ನಿರ್ಜೀವವಾಗಿ ಬಿದ್ದಿದೆ. ಇದಕ್ಕೆ ಕಾರಣನಾದವನ ಕೊರಳೇ ಬಲಿಯಾಗಿ ಹೋಗಲಿ. ಬೆರಳಿಗೆ ಕೊರಳ್ ಬಲಿಯಾಗಲಿ.

ಏಕಲವ್ಯ : ಅಮ್ಮಾ ಶಾಂತಳಾಗು. ಹೀಗೆಲ್ಲಾ ಶಪಿಸಬೇಡ.

ರಾಗ ತೋಡಿ । ಝಂಪೆ

ಶಾಪವಿಂತಾಡದಿರು ಅಮ್ಮ ಗುರುಗಳಿಗೆ ॥ ಪಲ್ಲವಿ ॥
ಪಾಪ ವಿಸ್ತರಿಸಿ ನುಂಗುವುದೆಮ್ಮ ಬದುಕೆಲ್ಲ ।
ಕಾಪಿಡುವ ದೈವಗಳಿಗೆರಗು ಸಾಕೆಮಗೆ ॥೧॥

ಏಕಲವ್ಯ : ಅಮ್ಮಾ, ಪುತ್ರವಾತ್ಸಲ್ಯದಿಂದಾಗಿ ನಿನ್ನ ಬಾಯಿಂದ ಕರ್ಣಕಠೋರವಾದ ಮಾತುಗಳೇ ಬಂದುವು. ನೀನು ಶಾಪವನ್ನೇ ನೀಡಿದೆ. ನನ್ನ ಗುರುಗಳನ್ನು ಹಾಗೆ ಶಪಿಸಬಾರದಿತ್ತಮ್ಮ. ಶಾಪ ಶಪಿತನನ್ನಷ್ಟೇ ತಟ್ಟುವುದಲ್ಲ. ಅದರ ದುಷ್ಪರಿಣಾಮವು ನಮ್ಮನ್ನೂ ಆವರಿಸಿಬಿಡುತ್ತದೆ. ನಾವು ಮಾಡಿದ ಬಾಯಿ ತಪ್ಪಿಗೆ ಕೈ ತಪ್ಪಿಗೆ ದೇವರಲ್ಲಿ ಕ್ಷಮೆಯನ್ನು ಯಾಚಿಸೋಣ. ಗುರು ಸ್ವರೂಪನಾದ ಪರಮಾತ್ಮನು ನಮ್ಮೆಲ್ಲರನ್ನೂ ರಕ್ಷಿಸಲಿ.

ಮಂಗಳಂ

ಡಾ. ಚಂದ್ರಶೇಖರ ದಾಮ್ಲೆಯವರು ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದು ಯಕ್ಷಗಾನದ ಹವ್ಯಾಸವನ್ನು ಬೆಳೆಸಿಕೊಂಡವರು. ಸುಳ್ಯದಲ್ಲಿ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯನ್ನು ಸಮಾನಾಸಕ್ತರೊಂದಿಗೆ ಸ್ಥಾಪಿಸಿ ಅನೇಕ ಯಕ್ಷಗಾನ ಕಾರ್ಯಕ್ರಮಗಳ ನೇತೃತ್ವ ವಹಿಸಿ ಯಶಸ್ವಿಯಾಗಿ ನಡೆಸಿದ್ದಾರೆ.

ಕರ್ನಾಟಕ ಸರಕಾರದಿಂದ ಅತ್ಯುತ್ತಮ ಕಾಲೇಜು ಶಿಕ್ಷಕ ರಾಜ್ಯ ಪ್ರಶಸ್ತಿಯ ಮೂಲಕ 1997ರಲ್ಲಿ ಗೌರವಿಸಲ್ಪಟ್ಟಿರುವ ಡಾ. ಚಂದ್ರಶೇಖರ ದಾಮ್ಲೆಯವರು ರಾಷ್ಟ್ರಕವಿ ಕುವೆಂಪುರವರ 'ಬೆರಳ್‌ಗೆ ಕೊರಳ್' ಎಂಬ ನಾಟಕದ ಆಶಯಕ್ಕೆ ಭಂಗಬಾರದಂತೆ ರಚಿಸಿದ ಈ ಪ್ರಸಂಗವನ್ನು ಅರ್ಥಸಹಿತವಾಗಿ ಪ್ರಕಟಿಸಲಾಗಿದೆ. ಹಿರಿಯರ ತಂಡಗಳಿಗೂ ಕಾಲಮಿತಿಯ ಪ್ರಯೋಗ ನೀಡಲು ಇದು ಸೂಕ್ತವಾದ ಪ್ರಸಂಗ ಎಂಬುದಾಗಿ ನಮ್ಮ ನಂಬಿಕೆ.

ಪ್ರಕಾಶಕರು

ಡಾ. ಚಂದ್ರಶೇಖರ ದಾಮ್ಲೆಯವರ ಇತರ ಕೃತಿಗಳು

ಓ....ಲಕ್ಷ್ಮಣಾ....(ಯಕ್ಷಗಾನ ಪ್ರಸಂಗ - ಅಪ್ರಕಟಿತ)

ವಿದೇಶೀಯರ ದೇಶದಲ್ಲಿ (ಪ್ರವಾಸ ಕಥನ)

ನೇರ (ಕಥಾ ಸಂಕಲನ)

ಜಾತ್ರೆಗಳ ಜಾನಪದೀಯ ಅಧ್ಯಯನ

ಗತಿಬಿಂಬ ಸುಳ್ಯ (ಸ್ಥಳೀಯ ಸಂಶೋಧನೆ)

ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ

Land Reforms and Changing Agrarian Relations.